ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 12
ಪುಟ : 12
ಬೆಲೆ : ₹ 5/-




## ಮನಶ್ಚೇನ್ನ ಲಗ್ನಂ ಗುರೋರಂಘ್ರಿ ಪದ್ಮೇ


ಪುಟ 3 ಶಿಕ್ಷಕ ದಿನಾಚರಣೆ ಒಂದು ವೈಚಾರಿಕ ಮಂಥನ

ಪುಟ 11 ಚಿಕಾಗೋ ಸಮ್ಮೇಳನದಲ್ಲಿ ವಿವೇಕಾನಂದರ ಸಾಧನೆ



A Journal of Karnataka State Secondary Teachers' Association

# ಸಂಪಾದಕೀಯ

ಸೆಪ್ಟೆಂಬರ್ 5 ಶಿಕ್ಷಕರೆಲ್ಲಾ ಸಂಭ್ರಮಿಸುವ ದಿನ. ಎಲ್ಲಾ ಶಿಕ್ಷಕ ಗೆಳೆಯರಿಗೂ ಶುಭಾಶಯಗಳು. ಎಲ್ಲಾ ಶಾಲೆಗಳಲ್ಲಿ ಸಮಾರಂಭಗಳು ನಡೆದು ಶಿಕ್ಷಕರಿಗೆ ಗೌರವ ಸಮರ್ಪಣೆ, ಹಿತನುಡಿಗಳು ಮುಗಿದಿದೆ. ಈ ಸಂದರ್ಭದಲ್ಲಿ ಗುರುವಂದನಾ ಕಾರ್ಯಕ್ರಮದಲ್ಲಿ ಶತಾಯುಷಿ ಪ್ರೊ. ಜಿ ವೆಂಕಟಸುಬ್ಬಯ್ಯನವರು ಆಡಿದ ಮಾತುಗಳನ್ನು ನೆನಪಿಸಿಕೊಳ್ಳುವುದು ಸಮಂಜಸ. '101 ವರ್ಷದ ನಾನು ಇಂದಿಗೂ ವಿದ್ಯಾರ್ಥಿಯೇ, ಪ್ರತಿದಿನ ಅಭ್ಯಾಸ ಮಾಡುತ್ತೇನೆ, ಹೊಸದನ್ನು ಕಲಿಯಲು ಪ್ರಯತ್ನಿಸುತ್ತೇನೆ'. ಇದು ನಮ್ಮೆಲ್ಲರಿಗೂ ವಿಶೇಷವಾಗಿ ಶಿಕ್ಷಕರಿಗೆ ಆದರ್ಶವಾಗಬೇಕು.

ಆದರ್ಶ ಶಿಕ್ಷಕರೂ, ಉಪರಾಷ್ಟ್ರಪತಿಗಳೂ, ರಾಷ್ಟ್ರಪತಿಗಳೂ ಆಗಿ ಉತ್ತಮ ಸೇವೆ ಸಲ್ಲಿಸಿದ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನವನ್ನು ದೇಶಾದ್ಯಂತ ಶಿಕ್ಷಕ ವೃತ್ತಿಗೆ, ಶಿಕ್ಷಕರಿಗೆ ಗೌರವ ಸೂಚಿಸಲು ಶಿಕ್ಷಕ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಡಾ. ರಾಧಾಕೃಷ್ಣನ್‌ರವರು ಮದ್ರಾಸಿನಲ್ಲಿ ಶಿಕ್ಷಣ ಇಲಾಖೆಯ ಉಪಸಹಾಯಕ ಇನ್‌ಸ್ಪೆಕ್ಟರ್ ಆಗಿ ವೃತ್ತಿಯನ್ನು ಆರಂಭಿಸಿದರು. ಅನಂತರ ಪ್ರೆಸಿಡೆನ್ಸಿ ಕಾಲೇಜು, ಸರ್ಕಾರಿ ಕಾಲೇಜಿನ ಅಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾಲಯ, ಕಲ್ಕತ್ತಾದಲ್ಲಿ ತತ್ವಶಾಸ್ತ್ರದ ಉಪಪ್ರಾಧ್ಯಾಪಕರು, ಪ್ರಾಧ್ಯಾಪಕರಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವದಿಂದಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾದರು.

ಮೈಸೂರಿನಿಂದ ಕಲ್ಕತ್ತಾಗೆ ಹೊರಟಾಗ ವಿದ್ಯಾರ್ಥಿಗಳು ಬೀಳ್ಕೊಟ್ಟ ರೀತಿ ಪ್ರೀತಿ ಪಾತ್ರರಾದ ಶಿಕ್ಷಕರಿಗೆ ಮಾತ್ರ ಸಿಕ್ಕಬಹುದು, ಚಕ್ರವರ್ತಿಗೂ ಅಲ್ಲ. ಮೈಸೂರಿನ ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಸಾರೋಟಿನಲ್ಲಿ ಕರೆದೊಯ್ದರು. ಸಾರೋಟು ಎಳೆಯಲು ಕುದುರೆ ಕಟ್ಟಲಿಲ್ಲ. ಸ್ವತಃ ತಾವೇ ಎಳೆದರು. ಡಾ. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು ಭಕ್ತರು ದೈವ ಮಂದಿರವನ್ನು ಅಲಂಕರಿಸುವಂತೆ ಶೃಂಗರಿಸಲಾಗಿತ್ತು. ರತ್ನಗಂಬಳಿ ಹಾಸಿ, ಒರಗು ದಿಂಬನ್ನು ಇಟ್ಟಿದ್ದರು. ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಲಾಗಿತ್ತು. ಶಿಕ್ಷಕರಿಗೆ ಶಿಷ್ಯರ ಈ ಪ್ರೀತಿಯ ಕಾಣಿಕೆಗಿಂತ ಇನ್ನೇನು ತಾನೇ ಬೇಕು?

ಸರ್. ಎಂ. ವಿಶ್ವೇಶ್ವರಯ್ಯನವರು ನಮ್ಮ ನಾಡಿನ ಇನ್ನೊಬ್ಬ ಪ್ರತಿಭಾವಂತ ಮಹಾಚೇತನ. ಕನ್ನಡ ನಾಡಿನ ಜನರ ಜೀವನದಲ್ಲಿ ಸರ್.ಎಂ.ವಿ ಯವರು ಹಾಸು ಹೊಕ್ಕಾಗಿದ್ದಾರೆ. ಒಬ್ಬ ಎಂಜಿನಿಯರ್ ಆಗಿ ದಕ್ಷ ಆಡಳಿತಗಾರರಾಗಿ, ಶಿಸ್ತು, ಪ್ರಾಮಾಣಿಕತೆಯ ಜೀವನ ನಡೆಸಿದ, ಶತಾಯುಷಿ, ಅಪರೂಪದ ವ್ಯಕ್ತಿತ್ವದವರು ವಿಶ್ವೇಶ್ವರಯ್ಯನವರು. ಸರ್.ಎಂ.ವಿ ಯವರ ನಿರ್ಮಾಣ ಕನ್ನಂಬಾಡಿ ಕಟ್ಟೆ ಅಥವಾ ಕೃಷ್ಣರಾಜಸಾಗರ ಮೈಸೂರು ಪ್ರಾಂತದ ಜನರ ಭಾಗ್ಯದ ಬಾಗಿಲನ್ನೇ ತೆರೆಯಿತು. ಇಂದಿಗೂ ಕೆ.ಆರ್.ಎಸ್ ನಮ್ಮ ಭಾಗ್ಯನಿಧಿಯಾಗಿದೆ. ಪ್ರತಿಷ್ಠಿತ ಮೈಸೂರು ಬ್ಯಾಂಕ್ ಸ್ಥಾಪನೆ, ಮೈಸೂರು ವಿಶ್ವವಿದ್ಯಾಲಯದ ಆರಂಭ, ಕನ್ನಡಿಗರ ಹೆಮ್ಮೆಯ ಕನ್ನಡ ಸಾಹಿತ್ಯ ಪರಿಷತ್‌ನ್ನು ಪ್ರಾರಂಭಿಸುವುದರಲ್ಲಿ ಸರ್.ಎಂ.ವಿಯವರ ಪಾತ್ರ ಹಿರಿದಾದುದು. ನಾಡಿನ ಜನರಿಗೆ ವಿದ್ಯುತ್ತನ್ನು ನೀಡುತ್ತಿರುವ ಜೋಗ್ ಜಲಪಾತದಿಂದ ವಿದ್ಯುತ್ ಉತ್ಪಾದನೆಯಲ್ಲಿ ವಿಶ್ವೇಶ್ವರಯ್ಯನವರ ಕಾಣಿಕೆಯನ್ನು ನಾವು ಮರೆಯುವಂತಿಲ್ಲ. ಇಂತಹ ಮಹಾನ್ ಚೇತನ ಹುಟ್ಟಿದ್ದು ಸೆಪ್ಟೆಂಬರ್ 15. ಈ ಸಂದರ್ಭದಲ್ಲಿ ಸರ್.ಎಂ.ವಿಯವರ ಕಾರ್ಯಗಳು, ಆದರ್ಶಗಳು ನಮಗೆಲ್ಲಾ ಸದಾ ಸ್ಫೂರ್ತಿದಾಯಕ.

ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಮಾತುಗಳಿಂದ ಜಗತ್ತಿಗೆ ಭಾರತವನ್ನು ವಿಖ್ಯಾತಗೊಳಿಸಿದ್ದಾ ಸೆಪ್ಟೆಂಬರ್ 11ರಂದು ಸ್ವಾಮಿ ವಿವೇಕಾನಂದರ 150ನೇ ಜಯಂತ್ಯುತ್ಸವದ ಈ ಸಂದರ್ಭದಲ್ಲಿ ಜಗದ್ವಿಖ್ಯಾತರಾದ ವಿವೇಕಾನಂದರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸುತ್ತೇನೆ.

ಸಂಪಾದಕ

# ವಿವೇಕವಾಣಿ




ನಮಗಿಂದು ಬೇಕಾಗಿರುವುದು ಜೀವನ ಸಂಗ್ರಾಮದಲ್ಲಿ ಹೋರಾಡುತ್ತಿರುವ ಯೋಧನ ಕೆಚ್ಚೆದೆಯ ಭಾವ; ಜೀವನವನ್ನು ಭೋಗೋದ್ಯಾನದಂತೆ ನೋಡುವ ವಿಲಾಸಿಯ ಭಾವವಲ್ಲ.

# ಪರಿವಿಡಿ


- ಶಿಕ್ಷಕ ದಿನಾಚರಣೆ – ಒಂದು ವೈಚಾರಿಕ ಮಂಥನ 3
- ವಿಶ್ವಶಕ್ತಿಯಾಗಿ ಭಾರತ 4
- ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆ ಕೈ ಬಿಟ್ಟ ಸರ್ಕಾರ 6
- ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ 7
- ಮೌಲ್ಯಮಾಪನ ಕಾರ್ಯಾಗಾರ 10

# ಶಿಕ್ಷಕರ ದಿನಾಚರಣೆ

■ ಎಚ್ಚೆನ್ನಾರ್

## ಒಂದು ವೈಚಾರಿಕ ಮಂಥನ

ಸರ್ವಪಲ್ಲಿ ರಾಧಾಕೃಷ್ಣರವರು ನಮ್ಮ ದೇಶದ ಎರಡನೇ ರಾಷ್ಟ್ರಪತಿಗಳಾಗಿದ್ದವರು. ಅದಕ್ಕೂ ಮೊದಲು ನಮ್ಮ ದೇಶದ ಉಪರಾಷ್ಟ್ರಪತಿಗಳಾಗಿ, ರಷ್ಯಾ ದೇಶದ ರಾಯಭಾರಿಯಾಗಿ ನಾಡಿಗೆ ಸೇವೆ ಸಲ್ಲಿಸಿ ಶ್ರೇಷ್ಠ ಮುತ್ಸದ್ದಿ ಎನಿಸಿಕೊಂಡವರು.

ಸ್ವತಃ ಬಡತನದಲ್ಲಿ ಬೆಳೆದು, ಸ್ವಂತ ಪರಿಶ್ರಮದಿಂದ ಜೀವನದಲ್ಲಿ ಮೇಲೇರಿಬಂದವರು. ಅನಿವಾರ್ಯವಾಗಿ ತತ್ವ ಶಾಸ್ತ್ರವನ್ನು ಓದಿನ ವಿಷಯವಾಗಿ ಆರಿಸಿಕೊಂಡರೂ, ರುಚಿಹೀನವಾಗಿದ್ದ ಅದರಲ್ಲೇ ಅಪಾರ ಆಸಕ್ತಿ, ಪ್ರೀತಿಗಳನ್ನು ಬೆಳೆಸಿಕೊಂಡು ರುಚಿತಳೆದವರು. ಅಷ್ಟೇ ಅಲ್ಲ ಆ ವಿಷಯ ವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಅಧ್ಯಾಪಕ ವೃತ್ತಿಯನ್ನು ಇಷ್ಟಪಟ್ಟು ಆರಿಸಿಕೊಂಡರು. ಅಧ್ಯಯನ– ಅಧ್ಯಾಪನವನ್ನು ತಮ್ಮ ಬದುಕಿನ ಉಸಿರಾಗಿ ಮಾಡಿಕೊಂಡರು. ಮೈಸೂರು, ಹೈದರಾಬಾದ್, ಕಲ್ಕತ್ತಾ, ಆಕ್ಸ್ ಫರ್ಡ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ತತ್ವಶಾಸ್ತ್ರವನ್ನು ಬೋಧಿಸಿ, ವಿದ್ಯಾರ್ಥಿಗಳಿಂದ, ಸಹೋದ್ಯೋಗಿಗಳಿಂದ ಅಪಾರ ಮೆಚ್ಚುಗೆ ಗಳಿಸಿದರು. ಪಾಶ್ಚಾತ್ಯ, ಪೌರ್ವಾತ್ಯ ತತ್ವಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ ತುಲನಾತ್ಮಕವಾಗಿ ವಿದ್ವತ್ ಪೂರ್ಣ ಗ್ರಂಥಗಳನ್ನು ರಚಿಸಿದರು.

ಇಂಥ ಶ್ರೇಷ್ಠ ಶಿಕ್ಷಕನ ಜನ್ಮದಿನ ಸೆಪ್ಟೆಂಬರ್ ಐದನ್ನು ಅವರಿಚ್ಛೆಯಂತೆ ಹಲವು ದಶಕಗಳಿಂದ ಪ್ರತಿ ವರ್ಷವೂ ಶಿಕ್ಷಕ ದಿನಾಚರಣೆಯನ್ನಾಗಿ ಆಚರಿಸಿಕೊಂಡು ಬರುತ್ತಿದ್ದೇವೆ. ಇತ್ತೀಚೆಗಂತೂ ಇದೊಂದು ಸಾಂಪ್ರದಾಯಿಕ ಉತ್ಸವವಾಗಿ ಮಾರ್ಪಟ್ಟಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ಮೆಚ್ಚಿನ ಶಿಕ್ಷಕರಿಗೆ ಹೂ ನೀಡುವುದು, ಶಾಲಾ ಸಮಾರಂಭದಲ್ಲಿ ರಾಧಾಕೃಷ್ಣನ್ ರವರ ಬಗ್ಗೆ ಹೇಳಿದ್ದೇ ಹೇಳುವುದು, ಸರ್ಕಾರವು ಅರ್ಜಿ ಗುಜರಾಯಿಸಿಕೊಂಡ ಶಿಕ್ಷಕರಲ್ಲಿ ಸಾಧ್ಯವಾದಷ್ಟು ತಮಗೆ ಬೇಕಾದ ಶಿಕ್ಷಕರಿಗೆ ರಾಜ್ಯ, ರಾಷ್ಟ್ರಪ್ರಶಸ್ತಿ ನೀಡುವುದು (ಇವರಲ್ಲಿ ಪ್ರಶಸ್ತಿಗೆ ಕೀರ್ತಿ ತರುವವರೂ ಕೆಲವರು ಇರುತ್ತಾರೆ) ಎಲ್ಲಾ ಯಾಂತ್ರಿಕ ಪ್ರಕ್ರಿಯೆ ಕಬ್ಬಿನ ರಸ ಹಿಂಡಿದ ಸಿಪ್ಪೆಯಂತೆ.

ನಿಜಕ್ಕೂ ಶಿಕ್ಷಕ ದಿನಾಚರಣೆ, ಶಿಕ್ಷಕರೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ದಿನ. ವರ್ಷಾಂತ್ಯದಲ್ಲಿ ವ್ಯಾಪಾರಿಯು ಲಾಭ ನಷ್ಟಗಳನ್ನು ತೂಗಿ ನೋಡುವಂತೆ ನಾವೂ ಸಹ ಶಿಕ್ಷಕ ದಿನಾಚರಣೆಯಂದು ನಮ್ಮ ವಾರ್ಷಿಕ ಸಫಲತೆ ವಿಫಲತೆಗಳನ್ನು ಲೆಕ್ಕಾಚಾರ ಮಾಡಬೇಕಲ್ಲವೇ?

ಶಿಕ್ಷಕರಲ್ಲಿ ವೃತ್ತಿಯನ್ನು ಪ್ರೀತಿಸಿ, ಬಯಸಿಬಂದವರು ಕೆಲವರಿದ್ದರೆ ಆಕಸ್ಮಿಕವಾಗಿ ಬಂದವರೇ ಅಧಿಕ. ಒಂದೆರಡು ವರ್ಷಗಳ ನಂತರ ಉತ್ತಮ ನೌಕರಿ ಸಿಕ್ಕಿತೆಂದು ಬಿಟ್ಟು ಹೋಗುವವರು ಎಷ್ಟೋ ಜನ ಉಳಿದವರು, ತಮ್ಮ ಹಣೆಬರಹವನ್ನು ಹಳಿಯುತ್ತಾ, ನೀರಿನಲ್ಲಿ ಮುಳುಗಿದ ನಂತರ ಚಳಿಯೇನು ? ಮಳೆಯೇನು? ಎಂದು ಸಾವರಿಸಿ ಕೊಂಡು ಹೋಗುವವರು! ಆದರೆ ರಾಧಾಕೃಷ್ಣನ್‌ರವರಂತೆ ಆಕಸ್ಮಿಕವಾಗಿ ಇಷ್ಟವಿಲ್ಲದ ವಿಷಯ ತೆಗೆದುಕೊಂಡರೂ ಅದನ್ನೇ ಆರಾಧಿಸುವವರು ನಾವಾಗಬೇಕಲ್ಲವೇ?

ಶಿಕ್ಷಕರನ್ನು ಶಿಲ್ಪಿಗಳಿಗೆ ಹೋಲಿಸುತ್ತಾರೆ. ಶಿಲ್ಪಿ ನಿರ್ಜೀವ ಕಲ್ಲನ್ನು ಕಡೆದು ಮೂರ್ತಿಯನ್ನು ನಿರ್ಮಿಸಿದರೆ ಶಿಕ್ಷಕ ಜೀವಂತ ವ್ಯಕ್ತಿಯ ಓರೆಕೋರೆಗಳನ್ನು ತೆಗೆದು ವ್ಯಕ್ತಿತ್ವಶಾಲಿಯನ್ನು ರೂಪಿಸುತ್ತಾನೆ. ಶಿಲ್ಪಿಗೆ ಪ್ರತಿಕಲ್ಲೂ ಪೂಜ್ಯ. ಅದರಲ್ಲಿ ಏನನ್ನು ಕಡೆದು ನಿಲ್ಲಿಸಬೇಕೆಂಬ ಸ್ಪಷ್ಟ ಚಿತ್ರಣ ಅವನ ಮನಸ್ಸಿನಲ್ಲಿ ಮೂಡಿಬರುತ್ತದೆ. ಗಣೇಶನನ್ನು ಕಡೆಯಬೇಕೆಂದರೆ ಗಣೇಶನೇ, ಈಶ್ವರನಲ್ಲ. ಆದರೆ ನಮ್ಮಲ್ಲಿ ಪ್ರತಿ ವಿದ್ಯಾರ್ಥಿಯ ಬಗ್ಗೆ ಈ ಭಾವ ಮೂಡಬೇಕಲ್ಲವೇ? ಹತ್ತಾರು ದಶಕಗಳ ಹಿಂದೆ ಓರ್ವ ಸುಬ್ರಮಣ್ಯ ಐಯ್ಯರ್ ಕಡೆದು ನಿಲ್ಲಿಸಿದ ಈ ನಾಡಿನ ಖ್ಯಾತ ವಿಜ್ಞಾನಿ ರಾಷ್ಟ್ರಪತಿ ಅಬ್ದುಲ್ ಕಲಾಂರಿಂದಾಗಿ ಅಯ್ಯರ್ ಚಿರಂಜೀವಿಯಾಗಿ ಹೋದರು. ನಮ್ಮ ಆಯ–ವ್ಯಯದ ಲೆಕ್ಕಾಚಾರದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಕಲಾಂರಂತೆ ಅವರ ಕೀರ್ತಿಗೆ, ಅವರ ಯಶಸ್ಸಿಗೆ, ನಮ್ಮನ್ನು ಭಾಜನರನ್ನಾಗಿ ಮಾಡುತ್ತಾರೆ?

ನಮ್ಮ ವೃತ್ತಿ ಜೀವನದಲ್ಲಿ ನಾವೆಷ್ಟು ಅಧ್ಯಯನ ಶೀಲರಾಗಿದ್ದೇವೆ? ನಡೆದಾಡುವ ನಿಘಂಟು ಎಂದು ಖ್ಯಾತನಾಮರಾದ ಶತಾಯುಷಿ ಜಿ. ವೆಂಕಟಸುಬ್ಬಯ್ಯನವರ ಮನೆಗೆ ನಾನು ಜುಲೈ 19 ರಂದು ಹೋಗಿದ್ದಾಗ 'ನಾನು ಇಂದಿಗೂ ದಿನಕ್ಕೆ 20–25 ಪುಟಗಳನ್ನು ಓದದೇ ವಿರಮಿಸುವುದಿಲ್ಲ' ಎಂದು ಅವರು ಹೇಳಿದ ಮಾತು ನಮಗೆ ದಾರಿದೀಪವಾಗಬೇಕಲ್ಲವೇ? ಅಧ್ಯಯನ ಮತ್ತು ಅಧ್ಯಾಪನ,

(8ನೇ ಪುಟಕ್ಕೆ.....)

**ಅಧ್ಯಕ್ಷರ ಲೇಖನಿಯಿಂದ....**

**ಕೆ. ಬಾಲಕೃಷ್ಣ ಭಟ್,** Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ವಿಶ್ವಶಕ್ತಿಯಾಗಿ ಭಾರತ

ಈ ದಿನಗಳಲ್ಲಿ ನಾವೆಲ್ಲರೂ ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷವನ್ನು ಹರ್ಷೋಲ್ಲಾಸಗಳಿಂದ ಆಚರಿಸುತ್ತಿದ್ದೇವೆ. ಅವರಿಗೆ 20 ವರ್ಷ ವಯಸ್ಸಾಗುತ್ತಿದ್ದಂತೆಯೇ ಅತ್ಯಂತ ಪ್ರಬುದ್ಧ ಚಿಂತನೆಗಳಿಂದ ಮತ್ತು ದೇಶಾದ್ಯಂತ ತಮ್ಮ ಪ್ರವಾಸದ ಅನುಭವದಿಂದ ಅವರು ಹೇಳುತ್ತಿದ್ದ ಒಂದೊಂದು ಮಾತೂ ಇಂದು ಅಕ್ಷರಶಃ ನಿಜವೆನಿಸತೊಡಗಿದೆ. ಅವರು ಅಂದು ಹೇಳಿದ್ದರು "ಭಾರತ ಒಂದು ವಿಶ್ವಶಕ್ತಿಯಾಗಿ ಹೊರಹೊಮ್ಮುವುದನ್ನು ತಡೆಯುವ ಶಕ್ತಿ ಪ್ರಪಂಚದಲ್ಲಿಯೇ ಇರದು". ಭಾರತೀಯ ನಾಗರೀಕತೆ ಸತ್ತು ಹೋಗಿದೆ ಮತ್ತು ಭಾರತೀಯರೆಂದರೆ ಸದಾ ಗುಲಾಮತನಕ್ಕೇ ಅರ್ಹರಾದವರು ಎಂದು ಜಗತ್ತು ಷರಾ ಬರೆದ ಹೊತ್ತಿಗೆ ಬಂದ ಈ ಯುವ ಸಂನ್ಯಾಸಿ "ನಾನು ಭವಿಷ್ಯದತ್ತ ಇಣುಕುವವನಲ್ಲ. ಅದರ ಅಗತ್ಯವೂ ನನಗಿಲ್ಲ. ಆದರೆ ನನ್ನ ಮುಂದಿರುವ ಜೀವನದಷ್ಟೇ ನನಗೆ ಸ್ಪಷ್ಟವಾದ ಒಂದು ದರ್ಶನವೆಂದರೆ ನಮ್ಮ ಪ್ರಾಚೀನ ತಾಯಿ ಮತ್ತೆ ಎದ್ದು ಕುಳಿತಿದ್ದಾಳೆ. ಹಿಂದೆಂದಿಗಿಂತಲೂ ವೈಭವೋಪೇತವಾಗಿ ತನ್ನ ಸಿಂಹಾಸನದ ಮೇಲೆ ಮಂಡಿಸಿದ್ದಾಳೆ. ಶಾಂತಿ ಮತ್ತು ಸ್ವಸ್ತಿ ವಾಚನದ ಧ್ವನಿಯಲ್ಲಿ ಅದನ್ನು ಇಡೀ ಜಗತ್ತಿಗೆ ಘೋಷಿಸಿ' ಎಂದಿದ್ದರು.

ಇಂದಿಗೆ 120 ವರ್ಷ ಪೂರ್ವದಲ್ಲಿ ಹೇಳಿದ ಈ ಮಾತನ್ನು ಅಂದು ಯಾರೂ ಗಂಭೀರವಾಗಿ ತೆಗೆದು ಕೊಂಡಿರಲಾರರು. ಇದು ಒಬ್ಬ ಆದರ್ಶವಾದಿ ಯುವಕನ ಆಸೆಯಷ್ಟೇ ಎಂದು ಬದಿಗೆ ಸರಿಸಿರಲಿಕ್ಕೆ ಸಾಕು. ಆದರೆ ಇಂದು ಅವರ 150ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ಪ್ರಪಂಚದ ಗತಿ ಮತ್ತು ಸ್ಥಿತಿ ಹಾಗೂ ಭಾರತ ವಿವಿಧ ಕ್ಷೇತ್ರಗಳಲ್ಲಿ ಇಡುತ್ತಿರುವ ಸ್ಪಷ್ಟವಾದ ಮತ್ತು ಸ್ಥಿರವಾದ ಹೆಜ್ಜೆಗಳನ್ನು ಗಮನಿಸಿದರೆ ಸ್ವಾಮೀಜಿ ಹೇಳಿದ ಭವಿಷ್ಯ ನಿಜವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅಮೇರಿಕದ ನ್ಯಾಷನಲ್ ಇಂಟೆಲಿಜೆನ್ಸ್ ಕೌನ್ಸಿಲ್ ಕೂಡಾ ಇತ್ತೀಚೆಗೆ ತನ್ನ ವರದಿಯಲ್ಲಿ 2030 ರ ವೇಳೆಗೆ ಭಾರತ ಚೀನಾವನ್ನು ಹಿಂದಿಕ್ಕಿ ಜಗತ್ತಿನ ಮೂರು ರಾಷ್ಟ್ರಗಳಲ್ಲಿ ಒಂದೆನಿಸಲಿದೆ ; ಅಮೇರಿಕಾ ಮತ್ತು ಚೀನಾ ಇತರ ಎರಡು ಅಂತಹ ದೇಶಗಳು ಎಂದು ಭವಿಷ್ಯ ನುಡಿದಿದೆ. ಭಾರತೀಯರ ಗುಣ ಸ್ವಭಾವ, ದೌರ್ಬಲ್ಯ ಮತ್ತು ಅಂತಃಶಕ್ತಿಯ ಪೂರ್ಣ ಪರಿಚಯವಿದ್ದ ಸ್ವಾಮೀಜಿ ತನ್ನ ಮುಂದಿರುವ ಸವಾಲುಗಳನ್ನು ಎದುರಿಸಲುಬೇಕಾದ ಕಠಿಣ ಶ್ರಮ ಮತ್ತು ಸಾತತ್ಯ ಶಕ್ತಿಯ ಕೊರತೆಯಿಂದ ಮಾತ್ರ ಭಾರತ ವಿಫಲವಾಗಿದೆ ಎಂದು ನಂಬಿದ್ದರು ಮತ್ತು ಭಾರತದ ಗತಕಾಲವು ಅದರ ಭವಿಷ್ಯಕ್ಕೆ ವಿಮರ್ಶಾತ್ಮಕವಾದ ಮಾರ್ಗದರ್ಶಿ ಆಗಬೇಕು ಎನ್ನುತ್ತಿದ್ದರು. ನಾವು ಭಾರತೀಯರು ಸ್ಫೂರ್ತಿ ಮತ್ತು ಬೌದ್ಧಿಕ ಚಿಂತನೆಗಳಿಗಾಗಿ ತಮ್ಮ ಗತ ಕಾಲದತ್ತ ನೋಡಬೇಕು ಎಂದ ಅವರು ಹಿಂದೂ ಭಾರತಕ್ಕೆ ನಿರ್ಭಯತೆ ಅಧ್ಯಾತ್ಮಿಕತೆ, ದೇಶಪ್ರೇಮ, ನೈತಿಕ ಮತ್ತು ದೈಹಿಕ ಬಲ, ಒಗ್ಗಟ್ಟು, ಸ್ವಾತಂತ್ರ್ಯ, ಶಿಕ್ಷಣ, ಸ್ತ್ರೀಯರಲ್ಲಿ ಗೌರವಗಳು ಬೇಕು, ಇವುಗಳ ಸಾಧನೆಗೆ ಮತ್ತು ಹಸಿವು ಬಡತನಗಳನ್ನು ನಿರ್ಮೂಲನಗೊಳಿಸಿ ಭಾರತ ವಿಶ್ವಗುರು ಸ್ಥಾನಕ್ಕೇರಲು ಅರ್ಪಣಾ ಮನೋಭಾವದ ಯುವಕ–ಯುವತಿಯರ ಒಂದು ಸೇನೆ ಅಗತ್ಯ ಎಂದು ಹೇಳುತ್ತಿದ್ದರು.

ಈ ಹಿನ್ನೆಲೆಯಲ್ಲಿ ನಾವು ಇಂದಿನ ಭಾರತವನ್ನೊಮ್ಮೆ ನೋಡಿದರೆ ಅದು ಒಂದು ಆರ್ಥಿಕ, ರಾಜಕೀಯ ಮತ್ತು ಸೇನಾಶಕ್ತಿ ಎನ್ನುವುದು ಶ್ರುತಪಟ್ಟಂತೆ ಕಾಣುತ್ತದೆ.

1998 ರಲ್ಲಿ ನಡೆದ ಪೋಖರಣ್ ಅಣ್ವಸ್ತ್ರ ಪರೀಕ್ಷಾ ಸ್ಫೋಟದೊಂದಿಗೆ ವಿಶ್ವ ರಾಜಕೀಯದಲ್ಲಿ ಭಾರತ ಒಂದು ಶಕ್ತಿಯಾಗಿ ಮೇಲೆದ್ದಿತು. ಇದೊಂದೇ ಘಟನೆ ಜಾಗತಿಕ ರಂಗದಲ್ಲಿ ಭಾರತದ ಅಸ್ತಿತ್ವವನ್ನು ಸಾರಿ ಹೇಳಿತು. ವಿಜ್ಞಾನ ಮತ್ತು ಬಲವನ್ನು ಬೆಳೆಸಿಕೊಳ್ಳಬೇಕೆಂದು ಸ್ವಾಮೀಜಿ ಹೇಳಿದ್ದು ನಿಜವಾಯಿತು. ದೇಶದ ಅಣ್ವಸ್ತ್ರ ಕಾರ್ಯಕ್ರಮ ಅದೆರಡನ್ನೂ ಪ್ರತಿನಿಧಿಸಿತ್ತು. 21ನೇ ಶತಮಾನದಲ್ಲಿ ಪ್ರಪಂಚ ಭಾರತವನ್ನು ಅಲಕ್ಷಿಸುವಂತಿಲ್ಲ ಎಂಬಲ್ಲಿಗೆ ಬಂತು ಸ್ಥಿತಿ. 2003–2004ರ ಹೊತ್ತಿಗೆ ದೇಶ ಒಂದು ಆರ್ಥಿಕ ಶಕ್ತಿಯಾಗಿ ಮೇಲೇಳಲು ಆರಂಭಿಸಿತು. ಕಳೆದ ಒಂದೆರಡು ದಶಕಗಳ ಅಂಕಿ ಅಂಶಗಳನ್ನು ಗಮನಿಸಿದರೆ ಭಾರತದ ಆರ್ಥಿಕ ಪ್ರಗತಿಗೆ ಆಂತರಿಕ ಉಳಿತಾಯ, ಆಂತರಿಕ ಹೂಡಿಕೆ ಮತ್ತು ಆಂತರಿಕ ಬೇಡಿಕೆಗಳೇ ಕಾರಣ ಎಂಬುದು ತಿಳಿಯುತ್ತದೆ.

ಸ್ವಾಮೀಜಿ ಅಭಿವೃದ್ಧಿ ಅಥವಾ ವಿಕಾಸದ ವಿಷಯದಲ್ಲಿ ಅಮೆರಿಕಾಗೆ ಹೇಳಿದ ಮಾತು ಮತ್ತು ಭಾರತೀಯರಿಗೆ ಹೇಳಿದ ಮಾತು ತೀರಾ ವಿಭಿನ್ನ. ಭಾರತಕ್ಕೆ ಆರ್ಥಿಕವಾಗಿ, ವೈಜ್ಞಾನಿಕವಾಗಿ ಮತ್ತು ಭೌತಿಕವಾಗಿ ಬೆಳೆಯಬೇಕೆಂದು ಕರೆ ನೀಡಿದ್ದರೂ ಕೂಡ ಅಮೇರಿಕ ತನ್ನ ಭೌತಿಕ ಸಂಪತ್ತಿನ ದುಷ್ಪರಿಣಾಮಗಳನ್ನು ತಡೆಗಟ್ಟಬೇಕಿದ್ದರೆ ಭಾರತದಿಂದ ಆಧ್ಯಾತ್ಮವನ್ನು ಆಮದು ಮಾಡಬೇಕೆಂದು ಸಲಹೆ ನೀಡಿದ್ದರು. ಸ್ವಾಮೀಜಿ ಅಮೇರಿಕಾಕ್ಕೆ ಈ ಮಾತನ್ನು ಹೇಳುವಾಗ ಅದು ಆಗಲೇ ಶ್ರೀಮಂತ ರಾಷ್ಟ್ರವೆಂಬ ಹೆಸರಿಗೆ ಓಂ ನಾಮ

(5ನೇ ಪುಟಕ್ಕೆ.....)

4ನೇ ಪುಟದಿಂದ... **ಭಾರತ**

ಹಾಕಿಯಾಗಿತ್ತು. ಅಂದು ಬಡ ಭಾರತದ ಈ ಮಾತನ್ನೇಕೆ ಕೇಳಬೇಕು ? ಎಂದು ಅನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಇಂದು ?

ಇಂದಿನ ಅಮೇರಿಕಾವನ್ನೊಮ್ಮೆ ನೋಡೋಣವೇ ? ಅಲ್ಲಿನ ಅರ್ಧದಷ್ಟು ಕುಟುಂಬಗಳು ಒಡೆದು ಹೋಗಿವೆ. ಶೇ. 42 ರಷ್ಟು ಮಕ್ಕಳು ಅವಿವಾಹಿತ ತಾಯಂದಿರ ಮಕ್ಕಳು. ಶೇ. 55 ರಷ್ಟು ಮೊದಲ ಮದುವೆಗಳು, ಶೇ. 67 ರಷ್ಟು ಎರಡನೇ ಮದುವೆಗಳು ಮತ್ತು ಶೇ. 47ರಷ್ಟು ಮೂರನೇ ಮದುವೆಗಳು ವಿಚ್ಛೇದನದಲ್ಲಿ ಅಂತ್ಯ ಕಾಣುತ್ತಿವೆ. ಅಮೇರಿಕಾವನ್ನು ಅನುಕರಿಸುವ ಇಂದಿನ ಭಾರತ ಇದನ್ನು ಬಯಸುತ್ತಿದೆಯೇ ? ಎಂದು ಪ್ರಶ್ನಿಸಬೇಕಾಗಿದೆ.

'ಶಕ್ತಿಯೇ ಬದುಕು, ನಿಃಶಕ್ತಿಯೇ ಸಾವು' ಎನ್ನುತ್ತಿದ್ದರು ಸ್ವಾಮೀಜಿ. 'ಶಕ್ತಿವಂತನನ್ನು ಮಾತ್ರ ಇನ್ನೊಬ್ಬ ಶಕ್ತಿವಂತ ಗೌರವಿಸುತ್ತಾನೆ' ಅಂದರು, ನಮ್ಮ ದೇಶದ ಅಪ್ರತಿಮ ವಿಜ್ಞಾನಿ ಹೋಮಿ. ಜೆ. ಬಾಬಾ.

ಡಾ. ರಾಜಾರಾಮಣ್ಣ, ಡಾ. ಅಬ್ದುಲ್ ಕಲಾಂ ಮುಂತಾದವರೂ ಈ ಮಾತುಗಳನ್ನು ಹಲವಾರು ಬಾರಿ ಪುನರುಚ್ಚರಿಸಿದ್ದಾರೆ. ಶಕ್ತಿಯ ಆರಾಧನೆಯನ್ನು ನಮ್ಮ ದೇಶದ ಅತ್ಯಂತ ಹಿರಿಯ ಚಿಂತಕರಾದಿಯಾಗಿ ಸರ್ವರೂ ಮಾಡಿದ್ದಾರೆ. ಶಕ್ತಿ ಭೌತಿಕ ಶಕ್ತಿ (ಅಣು ಶಕ್ತಿ ಸಹಿತ) ಮತ್ತು ಆಧ್ಯಾತ್ಮಿಕ ಶಕ್ತಿಯನ್ನೊಳಗೊಂಡಿದೆ. ಆಧ್ಯಾತ್ಮಿಕ ಶಕ್ತಿಯನ್ನು ಗಳಿಸದೆ ಕೇವಲ ಭೌತಿಕ ಶಕ್ತಿ ಅಪಾಯಕಾರಿ. ಹತ್ತಾರು ರೀತಿಯ ಭೌತಿಕ ಶಕ್ತಿಗಳ ಸಂಚಯನ ನಮ್ಮ ವಿಜ್ಞಾನಿಗಳಿಂದ ನಡೆದಿದೆ ಮತ್ತು ಇದುವೇ ಭಾರತವನ್ನು ಶಕ್ತಿವಂತ ರಾಷ್ಟ್ರವನ್ನಾಗಿ ಮಾಡಿರುವುದು. ಕಳೆದೊಂದು ವರ್ಷದಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆ – ಇಸ್ರೋ ಉಡ್ಡಯಿಸಿದ ಉಪಗ್ರಹಗಳ ಪಟ್ಟಿ ನೋಡಿದರೆ ನಮ್ಮ ಹೆಮ್ಮೆಗೆ ಮತ್ತಷ್ಟು ಗರಿ ಮೂಡುತ್ತದೆ.

ಕಳೆದ ವರ್ಷ ಅಗ್ನಿ–5ರ ಸಂಭ್ರಮ ಮುಗಿಯುವಷ್ಟರಲ್ಲೇ ಸರ್ವ ಋತುವಿನಲ್ಲೂ ಸ್ಪಷ್ಟವಾದ ಚಿತ್ರ ತೆಗೆಯಬಲ್ಲ ರಿಸ್ಯಾಟ್ –1 ಉಪಗ್ರಹ ನಿಖರ ಕಕ್ಷೆಯನ್ನು ತಲುಪಿತು. ಇದರ ಜೊತೆಗೆ ಲಘು ಯುದ್ಧ ವಿಮಾನ 'ತೇಜಸ್'ನ ನೌಕಾವತಾರದ ಮೊದಲ ಮಾದರಿ ಯಶಸ್ವಿ ಹಾರಾಟ ನಡೆಸಿತು. ಇತ್ತೀಚೆಗೆ ಉಡ್ಡಯನವಾದ 'ಇನ್ಸ್ಯಾಟ್ – 3ಡಿ' ಹವಾಮಾನ ಮುನ್ಸೂಚನೆಗೆ ನೆರವಾಗಬಲ್ಲಂತಹ ಬೃಹತ್ ಉಪಗ್ರಹ. ಅದಕ್ಕೂ ಮುನ್ನ ಉಡ್ಡಯನವಾದ IRNSS-1-A ಎಂಬುದು ಪಥ ಮಾರ್ಗದರ್ಶನಕ್ಕೆ ನೆರವಾಗುವ ಉಪಗ್ರಹ. ಅಂತೆಯೇ ಫೆಬ್ರವರಿಯಲ್ಲಿ ಕಕ್ಷೆಗೇರಿದ 'ಸರಳ್' ಭೂಮಿಯ ಮೇಲೆ ಸದಾ ನಿಗಾ ಇಡುವ ಉಪಗ್ರಹ.

ಭಾರತ ಸಾಫ್ಟ್‌ವೇರ್ ತಂತ್ರಜ್ಞಾನದಲ್ಲಿ ಮಾಡಿದ ಸಾಧನೆಯಿಂದ ನಮ್ಮೊಂದಿಗೆ ವಹಿವಾಟು ನಡೆಸದೇ ಹೋದರೆ ಅಮೆರಿಕಾ ಸೇರಿದಂತೆ ಯುರೋಪಿನ ಮುಂಚೂಣಿ ರಾಷ್ಟ್ರಗಳಲ್ಲಿ ನಸುಕೂ ಹರಿಯುವುದಿಲ್ಲ. ಈ ಸಾಧನೆಯಿಂದಲೇ ಜಗತ್ತಿನ ಬಲಿಷ್ಠ ರಾಷ್ಟ್ರಗಳಿಗೆ ನಮ್ಮ ದೇಶವೆಂದರೆ ಭಯಮಿಶ್ರಿತ ಗೌರವ. ನಮ್ಮನ್ನು ಲೆಕ್ಕಕ್ಕೂ ಸೇರಿಸದ ರಾಷ್ಟ್ರಗಳಿಂದು ನಮ್ಮ ವಿಜ್ಞಾನಿಗಳ ಸಾಧನೆಯನ್ನು ನೋಡಿ ನಿಬ್ಬೆರಗಾಗಿದ್ದಾರೆ.

ಸ್ವತಂತ್ರ ಭಾರತದ 65 ವರ್ಷಗಳ ಈ ಹಾದಿ ಒಂದು ರೀತಿಯಲ್ಲಿ ಅಗ್ನಿಪಥ. 450 ಟನ್ ತೂಕದ ರಾಕೆಟ್ ಮೂಲಕ ನಾಲ್ಕು ಸಹಸ್ರ ಕಿಲೋ ತೂಕದ ಉಪಗ್ರಹ ವೊಂದನ್ನು ಭೂಮಿಯಿಂದ 36,000 ಕಿ.ಮೀ. ದೂರದ ಕಕ್ಷೆಯೊಳಗೆ ನಿಖರವಾಗಿ ಕೂರಿಸಬಲ್ಲ ಸಾಮರ್ಥ್ಯ ನಮ್ಮದು. ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೂ ಸತತ ಸುತ್ತುತ್ತಿರುವ ಉಪಗ್ರಹಗಳ ಸರಮಾಲೆಯಿಂದ ವಿಶ್ವದ ಪ್ರಮುಖ ರಾಷ್ಟ್ರಗಳಿಗೂ ದೂರಸಂವೇದಿ ಚಿತ್ರಗಳನ್ನು ತೆಗೆದುಕೊಡುವುದರ ಮೂಲಕ ಮಿಲಿಯಗಟ್ಟಲೆ ಡಾಲರ್ ಗಳಿಕೆಯಾಗುತ್ತಿದೆ.

ಈ ಕ್ಷೇತ್ರದಲ್ಲಿ ನಾವೆಷ್ಟು ಪರಿಣತರೆಂದರೆ ನಮ್ಮ PSLU ಮೂಲಕ ಜಗತ್ತಿನ ಅನೇಕ ರಾಷ್ಟ್ರಗಳ ಉಪಗ್ರಹಗಳನ್ನು ಎತ್ತಿ ಕಕ್ಷೆಯಲ್ಲಿ ಕೂರಿಸುತ್ತಿದ್ದೇವೆ. ಒಂದೇ ಉಡ್ಡಯನಾ ವಾಹನದಲ್ಲಿ ಎಂಟೊಬತ್ತು ಉಪಗ್ರಹಗಳನ್ನು ವಿವಿಧ ಕಕ್ಷೆಗಳಿಗೆ ನಿಖರವಾಗಿ ತೂರಿ ಬಿಟ್ಟ ಕೀರ್ತಿ ನಮ್ಮದು. ಯುದ್ಧ ವಿಮಾನಕ್ಕೆ ಅಗತ್ಯವಾದ ಹಾರಾಟ ನಿಯಂತ್ರಣ ಸಾಫ್ಟ್‌ವೇರ್ ಅಮೇರಿಕ ಕೊಡದಿದ್ದರೆ ರೂಪಿಸಿಕೊಳ್ಳಬಲ್ಲ ಸಮರ್ಥರು ನಾವು. ಅಮೇರಿಕದ ಚಿತಾವಣೆ ಯಿಂದ ರಷ್ಯಾ ಉಪಗ್ರಹ ಉಡ್ಡಯನಾ ವಾಹನಕ್ಕೆ ಅಗತ್ಯವಾದ ಕ್ರಯೋಜೆನಿಕ್ ಎಂಜಿನ್ ಕೊಡಲು ನಿರಾಕರಿಸಿದಾಗ ಅದಕ್ಕಿಂತಲೂ ಉತ್ತಮ ಮಟ್ಟದ ಎಂಜಿನ್ ತಯಾರಿ ನಮ್ಮ ವಿಜ್ಞಾನಿಗಳಿಂದ ಸಾಧ್ಯವಾಗಿದೆ. ಪರಮಾಣು ವಿದ್ಯುತ್ ಸ್ಥಾವರವನ್ನು ದೇಶೀಯವಾಗಿ ನಿರ್ಮಿಸಬಲ್ಲೆವು. ಅಗತ್ಯ ಬಿದ್ದಲ್ಲಿ ಅದರಿಂದಲೇ ಪರಮಾಣು ಬಾಂಬನ್ನು ನಿರ್ಮಿಸಬಹುದು. 'ತೇಜಸ್' ಹೆಸರಿನ ಹಗುರ ಯುದ್ಧ ವಿಮಾನವನ್ನು ಇದುವರೆಗೂ 1837 ಬಾರಿ ಯಶಸ್ವಿಯಾಗಿ ಪರೀಕ್ಷಿಸಿದ ಕೀರ್ತಿಗೆ ನಾವು ಭಾಜನರು. ಜಗತ್ತಿನ ಬೆರಳೆಣಿಕೆಯ ರಾಷ್ಟ್ರಗಳು ಸಮರ ನೌಕೆಯ ಮೇಲಿಂದ ಹಾರಿ ಇಳಿಯಬಲ್ಲ ಯುದ್ಧ ವಿಮಾನಗಳನ್ನು ನಿರ್ಮಿಸಿವೆ. ಅಂಥ ವಿಶ್ವಮಟ್ಟದ ಸಾಧಕರ ಪಟ್ಟಿಯಲ್ಲಿ ಭಾರತವೂ ಸೇರಿದೆ. ಭಾರತ 2008 ರಲ್ಲಿ ಕಳುಹಿಸಿದ ಉಪಗ್ರಹ ಮೊದಲ ಬಾರಿಗೆ ಚಂದ್ರನ ಮೇಲೆ ನೀರಿರುವುದನ್ನು ಖಚಿತಪಡಿಸಿತು. ಇಂತಹ ಇನ್ನೂ ಅನೇಕ ಸಾಧನೆಗಳನ್ನು ಮಾಡಿದ ಮಹಾನ್ ವಿಜ್ಞಾನಿಗಳನ್ನು, ತಂತ್ರಜ್ಞಾನಿಗಳನ್ನು ಹಡೆದ ತಾಯಿ ಭಾರತಿಯೇ ಧನ್ಯಳು. ಇಂತಹ ಇನ್ನು ಅನೇಕ ಕನಸುಗಳನ್ನು ನಮಗೆಲ್ಲ ಪ್ರೇರಣೆ ನೀಡಿದ ಸ್ವಾಮೀಜಿ ನಮಗೆಲ್ಲರಿಗೂ ನಿರಂತರ ಸ್ಫೂರ್ತಿಯ ಚಿಲುಮೆ.

ಅಮೇರಿಕನ್ ಲೇಖಕಿ ಇಲಿಯನೋರ್ ಸ್ಟಾರ್ಕ್ ತನ್ನ 'The Gift Unopened' ಎನ್ನುವ ಪುಸ್ತಕದಲ್ಲಿ ಸ್ವಾಮಿ ವಿವೇಕಾನಂದರು ಮಾನವ ಜನಾಂಗಕ್ಕೆ ದೊರೆತ ಅದ್ವಿತೀಯ ಉಡುಗೊರೆ. ಆದರೆ ಈ ಉಡುಗೊರೆಯನ್ನು ತೆರೆದೇ ಇಲ್ಲ ಎಂದಿದ್ದಾರೆ. ನಾವು ಭಾರತೀಯರಾದರೂ ಈ ಕೊಡುಗೆ ಯನ್ನು ತೆರೆದು ನೋಡಿ ಅದರ ಮೇಲಿರುವ ಒಂದೊಂದು ಅಕ್ಷರವನ್ನೂ ಓದಿ ಅದರಂತೆ ನಡೆದರೆ ಅದುವೇ ನಾವು ಅವರಿಗೆ 150ನೇ ವರ್ಷದಲ್ಲಿ ಸಲ್ಲಿಸುವ ಕಾಣಿಕೆಯಾಗಬಹುದು.

●

# ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆ ಕೈ ಬಿಟ್ಟ ಸರ್ಕಾರ ಸಂಘದ ಹೋರಾಟಕ್ಕೆ ಜಯ

ಗೆ,

ದಿನಾಂಕ: 10:08:2013

**ಮಾನ್ಯ ಶ್ರೀ. ಕಿಮ್ಮನೆ ರತ್ನಾಕರವರು**
ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ.

**ವಿಷಯ : ಪ್ರೌಢಶಾಲಾ ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆಯನ್ನು ತಕ್ಷಣ ಕೈಬಿಡುವ ಕುರಿತು**

ಮಾನ್ಯರೇ,

ರಾಜ್ಯದಲ್ಲಿ ಈಗಿರುವ ಶಿಕ್ಷಣ, ವಿದ್ಯಾರ್ಥಿ ಅನುಪಾತ ಹಾಗೂ ಸಂಬಂಧಿಸಿದ ನಿಯಮಗಳು ಕಾಲ ಬಾಹಿರವಾಗಿದ್ದು, ವ್ಯಾಪಕ ನಿರಂತರ ಮೌಲ್ಯಮಾಪನ (C.C.E.) ಜಾರಿಗೊಳಿಸುತ್ತಿರುವ ಈ ಸಂದರ್ಭದಲ್ಲಿ ಈ ಹಳೆಯ ಮಾನದಂಡಗಳನ್ನಿಟ್ಟುಕೊಂಡು ವಿದ್ಯಾರ್ಥಿ-ಶಿಕ್ಷಕರ ಅನುಪಾತದಂತೆ ಹೆಚ್ಚುವರಿ ಪ್ರಕ್ರಿಯೆ ಮಾಡುವುದರಿಂದ ರಾಜ್ಯ ಶಿಕ್ಷಣ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಈಗಾಗಲೇ ಕರ್ನಾಟಕ ಸರ್ಕಾರ ದೇಶದ ಮಾದರಿ ರೀತಿಯಲ್ಲಿ ಕರ್ನಾಟಕದಲ್ಲೂ ಕೂಡ ಆರ್.ಎಮ್.ಎಸ್.ಎ. ಸ್ವರೂಪದ **'ವಿಲೀನ ವಿಂಗಡನೆ ಪ್ರಕ್ರಿಯೆ'** (Restructure of primary & Secondary education) ದೆಹಲಿಯ ನೀಪಾದ ಮುಖ್ಯಸ್ಥರಾದ ಪ್ರೊ. ಗೋವಿಂದ ಸಮಿತಿ ವರದಿ ಕಾರ್ಯಾಲಯಕ್ಕಾಗಿ ಕಾದಿದೆ. ಈಗ ರಾಜ್ಯದಲ್ಲಿ 8ನೇ ತರಗತಿಯನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆ ಎರಡರಲ್ಲೂ ಆರಂಭಿಸಲಾಗಿದೆ. ರಾಜ್ಯದ ಶಿಕ್ಷಣ ಕ್ಷೇತ್ರ ಪರಿವರ್ತನೆಯ ಕಾಲಘಟ್ಟದಲ್ಲಿದೆ. ಈಗಿರುವ ಎಲ್ಲಾ ಸಮಸ್ಯೆಗಳು ಪರಿವರ್ತನೆ ಕಾಲಘಟ್ಟದ ಸಮಸ್ಯೆಗಳು. ಹೀಗಾಗಿ ಗೋವಿಂದ ಸಮಿತಿ ವರದಿಯ ಮೇಲೆ ಸೂಕ್ತ ನಿರ್ಣಯವಾಗುವವರೆಗೂ ಶಿಕ್ಷಕರ ಹೆಚ್ಚುವರಿ ಮಾಡುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು ಹಾಗೂ ಶಿಕ್ಷಕ-ವಿದ್ಯಾರ್ಥಿ ಅನುಪಾತ ಸೂಕ್ತವಾಗಿ ನಿರ್ಣಯವಾಗುವವರೆಗೂ C.C.E. ಜಾರಿಯನ್ನು ತಡೆಯಬೇಕು.

ಈಗಿರುವ 70 ವಿದ್ಯಾರ್ಥಿಗಳಿಗೆ ಒಂದು ತರಗತಿಯ ವಿದ್ಯಾರ್ಥಿಗಳ C.C.E. ಪರಿಣಾಮಕಾರಿ ಸಾಧ್ಯವೇ?

ಸರ್ಕಾರ ಅಧ್ಯಯನ ನಡೆಸಿ ಎಲ್ಲಾ ಶಿಕ್ಷಕ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಣಯ ಮಾಡಬೇಕೆಂದು ವಿನಂತಿಸುತ್ತೇವೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿಗಳು

| | | | |
|---|---|---|---|
| **ಶ್ರೀ ಕೆ.ಬಾಲಕೃಷ್ಣ ಭಟ್** | **ಶ್ರೀಅರುಣ್ ಶಹಾಪೂರ್** | **ಶ್ರೀ ಶಿವಾನಂದ ಸಿಂಧನಕೇರಾ** | **ಶ್ರೀ ಜಿ.ಎಸ್.ಕೃಷ್ಣಮೂರ್ತಿ** |
| ಅಧ್ಯಕ್ಷರು | ಕಾರ್ಯಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಕಾರ್ಯಾಲಯ ಮುಖ್ಯಸ್ಥರು |

**ಮೇಷ್ಟ್ರು : ಪ್ರಳಯ ಆದಾಗ ಕೇವಲ ಮನು ಮಹರ್ಷಿ ಮಾತ್ರ ಉಳಿದುಕೊಂಡಿದ್ದು. ನಾವೆಲ್ಲಾ ಆತನ ಮಕ್ಕಳು ಆದ್ದರಿಂದ ನಾವು ಮಾನವರು.**

**ನಾಣಿ : ನಾವೆಲ್ಲಾ ಕೋತಿಯಿಂದ ಬಂದವರು ಎಂದು ನಮ್ಮಪ್ಪ ಹೇಳುತ್ತಿದ್ದರು.**

**ಮೇಷ್ಟ್ರು : ಮುಚ್ಚೋ ಬಾಯಿ, ನಾನು ನಿನ್ನ ವಂಶದ ಬಗ್ಗೆ ಹೇಳ್ತಾ ಇಲ್ಲಾ, ಇಡೀ ಜಗತ್ತಿನ ಕಥೆ ಹೇಳ್ತಾ ಇರೋದು.**

# ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (CCE)

■ ವಿ. ರಾಜ, ಅಧ್ಯಕ್ಷರು ಬೆಂಗಳೂರು ದಕ್ಷಿಣ ಜಿಲ್ಲೆ, ಕರಾಮಾಶಿಶ

ಕಳೆದ ಸಂಚಿಕೆಯಿಂದ...

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವು ಸ್ವಾವಲೋಕನದ ಸಾಧನವಾಗಿದ್ದು ಕಾರ್ಯನಿರತ ಶಿಕ್ಷಕರನ್ನು ಮತ್ತಷ್ಟು ವೃತ್ತಿಪರರನ್ನಾಗಿಸುತ್ತದೆ. ಮಕ್ಕಳು ತಮ್ಮ ಜ್ಞಾನವನ್ನು ಪುನರ್ ರಚಿಸಿಕೊಳ್ಳಲು ಇಂಬು ನೀಡುತ್ತದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ನಿರಂತರ ಹಾಗೂ ವ್ಯಾಪಕ ಮೌಲ್ಯ ಮಾಪನದ ಅನುಷ್ಠಾನದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದೆ. ಹೀಗೆ 2013–14 ರ ಸಾಲಿನಲ್ಲಿ ಪರಿಷ್ಕರಣೆಗೊಂಡ ಕೆಲವು ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಜ್ಞಾನ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಪ್ರತ್ಯೇಕವಾಗಿ ಅವಲೋಕಿಸಿ ಮೌಲ್ಯಮಾಪನ ಮಾಡಲಾಗುತ್ತಿತ್ತು. ಆದರೆ ಈ ವರ್ಷ ಜ್ಞಾನ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಒಟ್ಟಾಗಿ ಗಮನಿಸಿ ಅಂಶ ನೀಡಬೇಕು. ಹಿಂದಿನ ಸಾಲಿನಲ್ಲಿ ಶಿಕ್ಷಕರು ಜ್ಞಾನಾತ್ಮಕ ವಲಯಕ್ಕೆ ಒತ್ತು ನೀಡುವುದನ್ನು ತಪ್ಪಿಸಲು ಇವುಗಳನ್ನು ಒಟ್ಟಾಗಿ ಗಮನಿಸಿದರೂ ಪ್ರತ್ಯೇಕವಾಗಿ ಅಂಕ ನೀಡಲು ತಿಳಿಸಲಾಗಿತ್ತು.

ಒಂದರಿಂದ ನಾಲ್ಕನೆಯ ತರಗತಿಯವರೆಗೆ ಇಂಗ್ಲೀಷ್ ವಿಷಯವೂ ಕಲಿಕಾ ಭಾಷೆಯಾಗಿದೆ. ಅದು ಹಿಂದೆ ಸಾಂಪ್ರದಾಯಿಕ ಮೌಲ್ಯಮಾಪನ ಪದ್ಧತಿಗೆ ಒಳಪಡುತ್ತಿರಲಿಲ್ಲ. ಆದರೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದಲ್ಲಿ ಸದರಿ ಇಂಗ್ಲೀಷ್ ಕಲಿಸುವಿಕೆಯೂ ಸಹ ರೂಪಣಾತ್ಮಕ ಮೌಲ್ಯಮಾಪನಕ್ಕೆ ಒಳಪಡುತ್ತದೆ.

ಪ್ರಗತಿ ಪತ್ರದಲ್ಲಿ ನಮೂದಿಸುವ ಉದ್ದ ಹಾಗೂ ಕಂಬ ಸಾಲುಗಳನ್ನು ಕಡಿತಗೊಳಿಸಿ ಸರಳೀಕರಿಸಲಾಗಿದೆ.

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು ಕೈಗೊಳ್ಳಲು ಪ್ರಸ್ತುತ 5 ರಿಂದ 8ನೆಯ ತರಗತಿಯವರೆಗೆ ಶೈಕ್ಷಣಿಕ ಅವಧಿಯನ್ನು ಸೆಮಿಸ್ಟರ್ ಪದ್ಧತಿಯಂತೆ ಮಾರ್ಪಡಿಸಿಕೊಳ್ಳುವುದು ಹಾಗೂ ಮೌಲ್ಯಮಾಪನವನ್ನು NCF - 05 ಮತ್ತು RTE-09 ರ ಆಶಯಗಳಂತೆ ಹಮ್ಮಿಕೊಳ್ಳಬೇಕು.

(SA-1) ಸಂಕಲನಾತ್ಮಕ ಮೌಲ್ಯಮಾಪನವನ್ನು 5 ರಿಂದ 8ನೆಯ ತರಗತಿಯವರೆಗೆ 50 ಅಂಕಗಳಿಗೆ (40 ಲಿಖಿತ ಮತ್ತು 10 ಮೌಖಿಕ) ಪ್ರತಿ ವಿಷಯದಲ್ಲಿ ಹಮ್ಮಿಕೊಳ್ಳುವುದು. ನಂತರ ಅದನ್ನು ಶೇ. 30ಕ್ಕೆ ಇಳಿಸಿಕೊಳ್ಳುವುದು.

(SA-1 ) ಇದೇ ರೀತಿ 9ನೆಯ ತರಗತಿಗೆ 100 ಅಂಕಗಳಿಗೆ (90 ಲಿಖಿತ + 10 ಮೌಖಿಕ) ಪ್ರತಿ ವಿಷಯದಲ್ಲಿ ಹಮ್ಮಿಕೊಳ್ಳುವುದು. ನಂತರ ಅದನ್ನು ಶೇ. 30ಕ್ಕೆ ಇಳಿಸಿಕೊಳ್ಳುವುದು.

9ನೆಯ ತರಗತಿಯನ್ನು ಸೆಮಿಸ್ಟರ್ ಪದ್ಧತಿಗೆ ಅಳವಡಿಸಿಲ್ಲ. SA-1 ಅನ್ನು ಅರ್ಧ ವಾರ್ಷಿಕವೆಂತಲೂ SA-2 ಅನ್ನು ವಾರ್ಷಿಕವೆಂತಲೂ ಪರಿಗಣಿಸಬೇಕು.

ಪ್ರಕ್ರಿಯೆ ಹಾಗೂ ಪ್ರಾಯೋಗಿಕ ವಿಷಯಗಳು ಪ್ರಧಾನವಾಗಿರುವ ದೈಹಿಕ ಮತ್ತು ಆರೋಗ್ಯ ಶಿಕ್ಷಣದಲ್ಲಿ ರೂಪಣಾತ್ಮಕ ಮೌಲ್ಯಮಾಪನದ ಅನುಪಾತ ಶೇ. 60 ಇದ್ದು, ಸಂಕಲನಾತ್ಮಕ ಮೌಲ್ಯಮಾಪನದ ಅನುಪಾತ ಶೇ. 40 ಇರುತ್ತದೆ. ಹಾಗೆಯೇ ಕಲಾ ಶಿಕ್ಷಣ ವಿಷಯಗಳಲ್ಲಿ ರೂಪಣಾತ್ಮಕ ಮೌಲ್ಯಮಾಪನದ ಅನುಪಾತ ಶೇ. 80 ಇದ್ದು ಸಂಕಲನಾತ್ಮಕ ಮೌಲ್ಯಮಾಪನ ಅನುಪಾತ ಶೇ. 20 ಇರುತ್ತದೆ.

ಪಠ್ಯ ವಿಷಯಗಳಲ್ಲಿ ನೇರವಾಗಿ ಗ್ರೇಡ್ ನಮೂದಿಸಿದರೆ ಸಾಮಾಜಿಕ – ವೈಯಕ್ತಿಕ ಕೌಶಲಂತರ ಅಂಶಗಳಿಗೆ ವಿವರಣಾತ್ಮಕ ಮಾನಕಗಳನ್ನು ಪ್ರಗತಿ ಪತ್ರದಲ್ಲಿ ನಮೂದಿಸಿ ಗ್ರೇಡ್ ನೀಡಬೇಕು.

ಸಿಸಿಇ ಎಂದೊಡನೆಯೇ ಅದು ದಾಖಲೆಗಳ ಹೊರೆ ಎಂಬ ಅಭಿಪ್ರಾಯ ಬರುವಂತಾಗಿದೆ. ಪ್ರತಿಯೊಂದು ಮಗುವನ್ನು ಅವಲೋಕಿಸಿ ಅರ್ಥೈಸಿಕೊಳ್ಳಲು ಕೆಲವು ದಾಖಲೆಗಳ ನಿರ್ವಹಣೆ ಅಗತ್ಯವಾಗಿದೆ.

### ಮಕ್ಕಳ ವೈಯಕ್ತಿಕ ನಮೂನೆಗಳು

ದರ್ಜಾಮಾಪನ, ಸಾಂದರ್ಭಿಕ ದಾಖಲೆ, ಕೃತಿ ಸಂಪುಟ, ಪ್ರಶ್ನಾವಳಿ, ತಾಳೆ ಪಟ್ಟಿಗಳು, ಅವಲೋಕನ ಪಟ್ಟಿಗಳು ಮುಂತಾದವುಗಳನ್ನು ನಿರ್ವಹಿಸಬೇಕು.

### ಶಿಕ್ಷಕರ ವೈಯಕ್ತಿಕ ದಾಖಲೆ

ಕ್ರೋಢೀಕೃತ (ಅಂಕಗಳ) ದಾಖಲೆ, ಪ್ರಗತಿ ಪತ್ರ, ಮುಂತಾದವುಗಳನ್ನು ನಿರ್ವಹಿಸಬೇಕು.

(7ನೇ ಪುಟಕ್ಕೆ.....)

6ನೇ ಪುಟದಿಂದ...

## ವ್ಯಾಪಕ ಮೌಲ್ಯಮಾಪನ

5 ರಿಂದ 9ನೆಯ ತರಗತಿಯ ಸಹಪಠ್ಯ ಚಟುವಟಿಕೆಗಳ ಅವಲೋಕನದ ತಪಶೀಲು ಪಟ್ಟಿಗಳ ಮಾದರಿಗಳನ್ನು ಇಲ್ಲಿ ನೀಡಲಾಗಿದೆ.

ಭಾವನಾತ್ಮಕ ಸಾಮಾಜಿಕ ಕೌಶಲಗಳ ತಪಶೀಲು ಪಟ್ಟಿಯಲ್ಲಿ ಈ ರೀತಿಯ ಪ್ರಶ್ನಾವಳಿಗಳನ್ನು ನಮೂದಿಸಬಹುದಾಗಿದೆ.

1. ವಿದ್ಯಾರ್ಥಿಯು ಶಾಲೆಯ ಶಿಸ್ತನ್ನು ಗೌರವಿಸುತ್ತಾರೆಯೇ ?
2. ಯಾವುದೇ ಚಟುವಟಿಕೆ /ಸ್ಪರ್ಧೆ ನನ್ನಿಂದ ಸಾಧ್ಯ ಎಂದು ಮುಂದೆ ಬರುತ್ತಾರೆಯೇ ?
3. ತನಗೆ ನೋವಾಗಿರುವ ಸಂದರ್ಭದಲ್ಲೂ ಅವನ್ನು ಮರೆತು ಬೇರೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆಯೇ ?
4. ಕೋಪದಿಂದಿರುವ ತನ್ನ ಸಹಪಾಠಿಯೊಂದಿಗೆ ಸಂಯಮದಿಂದ ವರ್ತಿಸುತ್ತಾರೆಯೇ ?
5. ಅಂತರಾವಲೋಕನ ಮಾಡಿಕೊಂಡು ತನ್ನ ತಪ್ಪನ್ನು ಒಪ್ಪಿಕೊಂಡು ಬದಲಾಗಲು ಪ್ರಯತ್ನಿಸುತ್ತಾರೆಯೇ ?
6. ತಮ್ಮ ಸಹಪಾಠಿಗಳಿಗೆ ಸಹಾಯ ಮಾಡೋಣವೆಂದು ಸಲಹೆ ನೀಡುತ್ತಾರೆಯೇ ?
8. ತನ್ನ ವಿಚಾರಗಳನ್ನು ಬೇರೆಯವರೊಡನೆ ಹಂಚಿಕೊಳ್ಳುತ್ತಾರೆಯೇ ?
9. ಬೇರೆಯವರ ಉತ್ತಮ ವಿಚಾರವನ್ನು ಪ್ರಶಂಸೆ ಮಾಡುತ್ತಾರೆಯೇ ?
10. ಶಿಕ್ಷಕರು ಗುರುತಿಸದ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಬಂದು ಕೇಳುತ್ತಾರೆಯೇ ?

### ಸಂಘಟನಾತ್ಮಕ ಕೌಶಲಗಳ ತಪಶೀಲು ಪಟ್ಟಿ

1. ಶಾಲೆಯ ಕಾರ್ಯಕ್ರಮಗಳಲ್ಲಿ ನಾಯಕತ್ವ ವಹಿಸುತ್ತಾರೆಯೇ ?
2. ಕೊಟ್ಟ ಕೆಲಸವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಾರೆಯೇ ?
3. ಬೇರೆಯವರ ಕಷ್ಟ / ಸಮಸ್ಯೆಗಳಿಗೆ ಸ್ಪಂದಿಸುತ್ತಾರೆಯೇ ?
4. ಗುಂಪಿನ ಇತರ ಸದಸ್ಯರೊಡನೆ ಹೊಂದಿಕೊಳ್ಳುತ್ತಾರೆಯೇ ?
5. ಶಾಲೆ / ಸಮುದಾಯದ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆಯೆ ?

### ವೈಜ್ಞಾನಿಕ ಕೌಶಲಗಳ ತಪಶೀಲು ಪಟ್ಟಿ

1. ಪ್ರಾಯೋಗಿಕ ಕೌಶಲವನ್ನು ಪ್ರದರ್ಶಿಸುತ್ತಾರೆಯೇ ?
2. ವೈಜ್ಞಾನಿಕ ಮನೋಭಾವ ಹೊಂದಿದ್ದಾರೆಯೇ ?
3. ವಿಜ್ಞಾನದ, ರಸ ಪ್ರಶ್ನೆ, ಯೋಜನೆ ತಯಾರಿಕೆಯಲ್ಲಿ ಆಸಕ್ತಿ ಇದೆಯೇ?
4. ವಿಷಯವನ್ನು ವಿಶ್ಲೇಷಿಸುವ ಮನೋಭಾವ ವಿದೆಯೇ ?
5. ಏಕೆ, ಹೇಗೆ, ಏನು ? ಎಂಬ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾರೆಯೇ?

### ಸೃಜನಶೀಲ ಕೌಶಲಗಳ ತಪಶೀಲು ಪಟ್ಟಿ

1. ಸೃಜನಶೀಲ ಕೌಶಲ ಪ್ರದರ್ಶನ ಕಲಾ ಪ್ರಕಾರಗಳಲ್ಲಿ ಭಾಗವಹಿಸುತ್ತಾರೆಯೇ?
2. ಕ್ರಿಯಾಶೀಲ ಪ್ರದರ್ಶನ ನೀಡುತ್ತಾರೆಯೇ ?
3. ಕಲಾಕೃತಿಗಳನ್ನು ಸಕಾರಣವಾಗಿ ಮೆಚ್ಚುತ್ತಾರೆಯೇ ?
4. ಶಾಲೆ / ತಾಲೂಕು / ಜಿಲ್ಲೆ / ರಾಜ್ಯ ಮಟ್ಟದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆಯೇ ?
5. ಕಥೆ / ಕವನ /ಚಿತ್ರ ರಚಿಸುವುದರಲ್ಲಿ ಪ್ರತಿಭೆ ಪ್ರದರ್ಶಿಸುತ್ತಾರೆಯೇ ?

(ಮುಂದುವರಿಯುವುದು...)

**ವಿವೇಕ ವಾಕ್ಯ**

**ನಾವೆಲ್ಲರೂ ದೇವರ ಮಕ್ಕಳು. ಅಮರ ಆನಂದದ ಪಾಲುದಾರರು. ಪರಿಶುದ್ಧರೂ ಪರಿಪೂರ್ಣರೂ ಆದ ಚೇತನರು. ನಾವು ದುರ್ಬಲರು ಎಂದು ನಾವೆಂದೂ ತಿಳಿದುಕೊಳ್ಳಬಾರದು. ಎದ್ದು ನಿಲ್ಲಿ, ಧೈರ್ಯ ತಾಳಿ, ಬಲಿಷ್ಠರಾಗಿ.**

**ಭಾರತದ ಧ್ಯೇಯ ವಾಕ್ಯ 'ತ್ಯಾಗ ಮತ್ತು ಸೇವೆ'. ಇವೆರಡನ್ನೂ ಪ್ರಖರವಾಗಿ ಅಭಿವ್ಯಕ್ತಿಗೊಳಿಸಿದರೆ ಉಳಿದ ಸಮಸ್ಯೆಗಳು ತಂತಾನೇ ಪರಿಹಾರವಾಗುವುವು.**

3ನೇ ಪುಟದಿಂದ... **ಶಿಕ್ಷಕ ದಿನಾಚರಣೆ**

ಓರ್ವಶಿಕ್ಷಕನ ಜೀವನದ ಅವಿಭಾಜ್ಯ ಅಂಗವಾಗಬೇಕಲ್ಲವೇ? ನಾನು ಕೆಲಸ ಮಾಡಿದ ಸಂಸ್ಥೆಯ ಅಧ್ಯಕ್ಷರಾಗಿದ್ದ ಡಾ. ಎಚ್. ನರಸಿಂಹಯ್ಯನವರು (ಎಚ್.ಎನ್ ಎಂದೇ ಖ್ಯಾತರು) ಒಮ್ಮೆ 'ನಮ್ಮ ಅನೇಕ ಶಿಕ್ಷಕರ ವೃತ್ತಿ ಅನುಭವ ನಿವೃತ್ತಿಯ ಅಂಚನ್ನು ತಲುಪಿದಾಗಲೂ ಕೇವಲ ಒಂದೇ ವರ್ಷ' ಎಂದು ಹೇಳಿದ್ದು ಕೇವಲ ವ್ಯಂಗವಲ್ಲ ಅಲ್ಲವೇ?

ತರಗತಿಯಲ್ಲಿ ನಾವು ಬೋಧಿಸುವ ಮುಕ್ಕಾಲು ಗಂಟೆ ಒಂದು ಗಂಟೆ ಕೇವಲ ಪಠ್ಯ ವಿಷಯಕ್ಕೆ ಮಾತ್ರ ಸೀಮಿತವೇ? ಅಥವಾ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೂ ನಾವು ಗಮನ ನೀಡುತ್ತಿದ್ದೇವೆಯೇ?

ಸ್ವಾಮಿ ವಿವೇಕಾನಂದರು ಶಿಕ್ಷಣವೆಂದರೆ, 'ನಿಮ್ಮ ಮೆದುಳಿನಲ್ಲಿ ತುಂಬಿಕೊಂಡಿರುವ ಮಾಹಿತಿಯ ಮೊತ್ತವಲ್ಲ... ನಮಗೆ ಬೇಕಾದ್ದು ಜೀವನ ನಿರ್ಮಾಣ, ಮನುಷ್ಯ ನಿರ್ಮಾಣ, ಚಾರಿತ್ರ್ಯ ನಿರ್ಮಾಣ ಇವುಗಳ ಮೂಲಕ ಉದಾತ್ತ ಭಾವನೆಗಳನ್ನು ಕರಗತಮಾಡಿಕೊಳ್ಳಬೇಕು' ಎಂದಿದ್ದಾರೆ. ಆದ್ದರಿಂದ ಕೇವಲ ಪಠ್ಯಪುಸ್ತಕದ ವಿಷಯಗಳನ್ನು ನಾವು ವಿದ್ಯಾರ್ಥಿಗಳ ತಲೆಯಲ್ಲಿ ತುರುಕಿದರೆ ಅದರಿಂದ ಮಾನವ ನಿರ್ಮಿತ, ವ್ಯಕ್ತಿತ್ವ ವಿಕಸನ ಸಾಧ್ಯವೇ ಎಂಬುದನ್ನು ಯೋಚಿಸಬೇಕಲ್ಲವೇ?

ಅನೇಕ ಶಿಕ್ಷಕರಿಗೆ, ನಮಗೆ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಗೊಳಿಸಲೇ ಸಮಯವಿಲ್ಲ, ಮುಖ್ಯೋಪಾಧ್ಯಾಯರು, ಆಡಳಿತಮಂಡಳಿ ಹಾಗೂ ಇಲಾಖೆಯ ಒತ್ತಡದಿಂದಾಗಿ ಶೇಕಡಾವಾರು ಫಲಿತಾಂಶವನ್ನು ಹೆಚ್ಚಿಸಲೇಬೇಕು, ಹೀಗಾಗಿ ವ್ಯಕ್ತಿತ್ವ ವಿಕಸನ ಮಾಡುವುದು ಹೇಗೆ? ಎಂಬ ಪ್ರಶ್ನೆ ಬೃಹದಾಕಾರವಾಗಿ ಕಾಡಬಹುದು. ಆದರೆ ಈ ವೃತ್ತಿಯನ್ನು ನಮ್ಮ ಪ್ರವೃತ್ತಿಯಾಗಿ ಸ್ವೀಕರಿಸಿದವರಿಗೆ ಈ ಪ್ರಶ್ನೆ ಕಾಡದು. ಅವರ ಮುಂದೆ ತಾವೇನು ಮಾಡಬೇಕೆಂಬ ಸ್ಪಷ್ಟ ಚಿತ್ರಣವಿದೆ. ಓರ್ವ ತಾಯಿ ತನ್ನ ಮಗುವನ್ನು ಹೊತ್ತು ಬೆಟ್ಟ ಹತ್ತುತ್ತಾಳೆ ಆದರೆ ಅದರಷ್ಟೇ ತೂಕದ ಕಲ್ಲು ಗುಂಡನ್ನು ಹೊತ್ತು ಬೆಟ್ಟಹತ್ತಳು. ಹೀಗೆ ನಮ್ಮ ನಮ್ಮ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವೇ ನಮ್ಮ ಗುರಿಯಾದಾಗ ಯಾವ ಕೆಲಸವೂ ನಮಗೆ ಹೊರೆಯಾಗದು. ನಮ್ಮಲ್ಲಿ ಇದು ನನ್ನದು ಎಂಬ ಭಾವ ಬಲಿಯಬೇಕಷ್ಟೆ.

ಇನ್ನು ವ್ಯಕ್ತಿತ್ವ ವಿಕಸನ ಮಾಡುವುದು ಹೇಗೆ? ಎಂಥ ವಿದ್ಯಾರ್ಥಿಗಳನ್ನು ರೂಪಿಸಬೇಕು? ಇದಕ್ಕೇನಾದರೂ ಸಿಲೆಬಸ್ ಇದೆಯೇ? ಇಲ್ಲ. ನಮ್ಮ ಶಿಕ್ಷಣ ಇಲಾಖೆ ಇದಕ್ಕೆ ಸಿಲೆಬಸ್ ರೂಪಿಸಿಲ್ಲ. ಅದಕ್ಕೆ ಅದರ ಅಗತ್ಯವೂ ಕಾಣದು. ಹೀಗಾಗಿ ನಮ್ಮ ಸಿಲೆಬಸ್ ಅನ್ನು ನಾವೇ ರೂಪಿಸಿಕೊಳ್ಳಬೇಕು. ನನಗನ್ನಿಸುವ ಕೆಲವೊಂದು ಸಂಗತಿಗಳನ್ನು ನಿಮ್ಮಲ್ಲಿ ಹಂಚಿಕೊಳ್ಳುವೆ.

ನಾನು 2000ನೇ ಇಸವಿಯಲ್ಲಿ ಶಿಕ್ಷಕ ಮಹಾಸಂಘದ ಪ್ರತಿನಿಧಿಯಾಗಿ ಕೆನಡಾಕ್ಕೂ, 2005ರಲ್ಲಿ ಮಗಳ ಮನೆಗೆಂದು ಅಮೆರಿಕಾಗೂ ಹೋಗಿದ್ದೆ. ಅಲ್ಲಿನ ಖಾಸಗಿ ಹಾಗೂ ಸರ್ಕಾರೀ ಶಾಲೆಗಳಿಗೂ ಭೇಟಿನೀಡಿ ಅಧ್ಯಾಪಕರೊಂದಿಗೆ ಚರ್ಚಿಸಿದ್ದೆ. ಅಲ್ಲಿನ ಮಕ್ಕಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡಿದ್ದೆ. ಅಲ್ಲಿನ ಮಕ್ಕಳು ನೀವ್ಯಾರೆಂದು ಪ್ರಶ್ನಿಸಿದರೆ ಹೆಮ್ಮೆಯಿಂದ ಕೆನಡಿಯನ್, ಅಮೆರಿಕನ್ ಎಂದು ಹೇಳಿಕೊಳ್ಳುತ್ತಾರೆ. ಅಮೆರಿಕೆಯಲ್ಲಂತೂ ತಮ್ಮನ್ನು ಪರಿಚಯಿಸಿಕೊಳ್ಳುವಾಗ ಆಫ್ರಿಕನ್–ಅಮೆರಿಕನ್, ಚೈನೀ ಅಮೆರಿಕನ್, ಏಷ್ಯ ಅಮೆರಿಕನ್ ಎಂದು ತಮ್ಮ ಮೂಲವನ್ನು ಹೇಳುತ್ತಾರೆ. ಅದೇ ನಮ್ಮ ಮಕ್ಕಳು ಹೆಮ್ಮೆಯಿಂದ ನಾನು ಭಾರತೀಯ, ಹಿಂದೂಸ್ಥಾನಿ ಎಂದು ಹೇಳುವರೇ? ಇದನ್ನು ಕಲಿಸುವುದು ನಮ್ಮ ಕರ್ತವ್ಯವಲ್ಲವೇ?

ನಾಲ್ಕುವರೆ ವರ್ಷದ ನನ್ನ ಮೊಮ್ಮೊಗಳು ಅಮೆರಿಕೆಯಲ್ಲಿ ಶಾಲೆಗೆ ಹೋಗುತ್ತಾಳೆ. ಇತ್ತೀಚೆಗೆ ಫೋನ್ ಮಾಡಿ ನನಗೊಂದು ಪ್ರಶ್ನೆ ಕೇಳಿದಳು. Do you know whose picture is on the 'cent'? ಅಲ್ಲಿನ ಚಿಕ್ಕ ನಾಣ್ಯ ಸೆಂಟ್ ನ ಮೇಲಿರುವ ಚಿತ್ರ ಯಾರದ್ದು? ನಾನು ಗೊತ್ತಿಲ್ಲವೆಂದಾಗ ಅದು ಅಲ್ಲಿನ ರಾಷ್ಟ್ರಾಧ್ಯಕ್ಷ ಅಬ್ರಾಹಾಂ ಲಿಂಕನ್ ಎಂದು ಹೇಳಿ, ಅವರು ಈಗಿಲ್ಲ ಎಂಬ ಮಾತನ್ನು ಸೇರಿಸಿದಳು. ನನಗೆ ಆಶ್ಚರ್ಯವಾಯಿತು. ನಮ್ಮ ಮಕ್ಕಳಿಗೆ ನಾವು ಕೇವಲ ಟ್ವಿಂಕಲ್ ಟ್ವಿಂಕಲ್ ಲಿಟ್ಲಸ್ಟಾರ್ ಎಂದು ಹೇಳಿಕೊಟ್ಟರೆ, ಅಲ್ಲಿ ಅದರೊಂದಿಗೆ ಅಲ್ಲಿನ ರಾಷ್ಟ್ರೀಯ ಮಹಾಪುರುಷರನ್ನು ಪರಿಚಯಿಸುತ್ತಾರೆ. ಅಮೆರಿಕೆಗೆ ಇರುವುದು 300 ವರ್ಷಗಳ ಇತಿಹಾಸ. ನಮಗಾದರೋ ಸಹಸ್ರಾರು. ನಮ್ಮಲ್ಲಿನ ಮಹಾಪುರುಷರು ಅಗಣಿತ. ಅಲ್ಲಿ ಮಹಾಪುರುಷರನ್ನು ಪುಟ್ಟ ಮಕ್ಕಳಿಗೆ ಪರಿಚಯಿಸುವ ಕೆಲಸವನ್ನು ಅಧ್ಯಾಪಕರು ಮಾಡಬಹುದಾದರೆ, ನಾವೇಕೆ ಮಾಡುವುದಿಲ್ಲ?

ನಾವು ಪಾಠ ಮಾಡುತ್ತಲೇ ಕೆಲವೊಂದು ಮೌಲ್ಯಗಳನ್ನು ಕಲಿಸಬಹುದು. ಎಲ್ಲಾ ಜೀವನ ಮೌಲ್ಯಗಳನ್ನು ನಾನು 5 ಗುಂಪುಗಳಾಗಿ ಮಾಡುತ್ತೇನೆ.

1. ವೈಯುಕ್ತಿಕ ಮೌಲ್ಯ ---- Individual value
2 ಕುಟುಂಬ ಮೌಲ್ಯ ---- Family value
3 ಸಾಮಾಜಿಕ ಮೌಲ್ಯ ---- Social value
4 ರಾಷ್ಟ್ರೀಯ ಮೌಲ್ಯ ----- National value
5 ಆಧ್ಯಾತ್ಮಿಕ ಮೌಲ್ಯ ------ Spiritual value ●

# ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ತರಬೇತಿ ಕಾರ್ಯಾಗಾರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಪ್ರೌಢಶಾಲಾ ಶಿಕ್ಷಕರಿಗೆ ಒಂದು ದಿನದ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ತರಬೇತಿ ಕಾರ್ಯಾಗಾರವನ್ನು ಐ.ಟಿ.ಐ ವಿದ್ಯಾಮಂದಿರ, ದೂರವಾಣಿನಗರದಲ್ಲಿ ದಿನಾಂಕ: 23–08–2013 ರಂದು ಆಯೋಜಿಸಲಾಗಿದ್ದು, ಬೆಂಗಳೂರು ದಕ್ಷಿಣ ವಲಯ–4 ರ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಗಳ 150 ಕ್ಕಿಂತ ಹೆಚ್ಚು ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಎನ್.ಸಿ.ಎಫ್ 2005 ರ ಅನ್ವಯ ಪ್ರಸ್ತುತ ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲಿ ಕೇಂದ್ರೀಯ ಪಠ್ಯಕ್ರಮದಂತೆ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಇಲಾಖಾ ನಿಯಮಾನುಸಾರ ಜಾರಿಗೊಳಿಸಲಾಗಿರುವ ಈ ನೂತನ ಮೌಲ್ಯಮಾಪನ ಪದ್ಧತಿಯು ಮಕ್ಕಳಲ್ಲಿ ಪರೀಕ್ಷಾ ಭಯವನ್ನು ಹೋಗಲಾಡಿಸುವ ಹಾಗೂ ಮಗುವಿನ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವ ಹಾಗೂ ಮಗುವಿನಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಸರ್ವತೋಮುಖವಾಗಿ ಹೊರಗೆಳೆಯುವ ನಿಟ್ಟಿನಲ್ಲಿ ಒಂದು ಪರಿಣಾಮಕಾರಿಯಾದ ವಿಧಾನವಾಗಿದ್ದು, ಈ ಶಿಶು ಕೇಂದ್ರಿತ ಮೌಲ್ಯಮಾಪನವನ್ನು ಕಳೆದ ಅಂದರೆ 2012–13 ನೆಯ ಸಾಲಿನಿಂದ ಪರಿಚಯಿಸ ಲಾಗಿದ್ದರೂ, ಶಿಕ್ಷಕರಿಗೆ ಇದರ ಪ್ರಾಯೋಗಿಕ ಅನುಷ್ಠಾನ ಹಾಗೂ ದಾಖಲೆಗಳ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿ ಹಾಗೂ ಪರಿಶೀಲನೆಯ ಕೊರತೆಯಿಂದಾಗಿ ಇನ್ನೂ ಗೊಂದಲಮಯವಾಗಿಯೇ ಉಳಿದಿದ್ದು ಶಿಕ್ಷಕರ ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಈ ಪ್ರಯತ್ನ ಸಂದರ್ಭೋಚಿತ ಹಾಗೂ ಅತಿ ಅವಶ್ಯಕವೆನಿಸಿತ್ತು.

ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್‌ನ ಕನ್ನಡ ಅಧ್ಯಾಪಕರು, ಕನ್ನಡ ಭಾಷಾ ಸಂಪನ್ಮೂಲ ವ್ಯಕ್ತಿಗಳೂ ಆಗಿರುವ ಶ್ರೀಯುತ ವಿ.ರಾಜು ರವರು ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ಅರ್ಥ, ಮಹತ್ವ, ಮಗುವಿನ ಶೈಕ್ಷಣಿಕ ಬೆಳವಣಿಗೆಯ ದೃಷ್ಟಿಯಿಂದ ಇದರ ಅನಿವಾರ್ಯತೆ, ಶಾಲೆಗಳಲ್ಲಿ ಇದರ ಪ್ರಾಯೋಗಿಕ ಅನುಷ್ಠಾನ, ಹಾಗೂ ದಾಖಲೆಗಳ ನಿರ್ವಹಣೆ ಕುರಿತು ಸುಲಿದ ಬಾಳೆಯ ಹಣ್ಣಿನಂತೆ ಬಹಳ ಸರಳವಾದ ರೀತಿಯಲ್ಲಿ ಶಿಕ್ಷಕರ ಮನಮುಟ್ಟುವಂತೆ ಪರಿಚಯಿಸಿದ್ದು, ನಿಜವಾಗಿಯೂ ಶಿಕ್ಷಕರಲ್ಲಿ ಸಂತಸವನ್ನು ಮೂಡಿಸಿತ್ತು.

ಬೆಂಗಳೂರು ದಕ್ಷಿಣ ವಲಯ–4 ರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಯುತ ನಂಜುಂಡಯ್ಯನವರು ಈ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದು ಕಾರ್ಯಾಗಾರದ ಪ್ರಸ್ತುತತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೇ, ಶಿಕ್ಷಕ ಬದುಕಿರುವವರೆಗೂ ಕಲಿಯಬೇಕು.. ಶಿಕ್ಷಣದ ಅಂತಿಮ ಫಲಾನುಭವಿ ಮಗು ಇದರ ಲಾಭವನ್ನು ಪಡೆಯುವಂತಾಗಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶಿವಾನಂದ ಸಿಂದನಕೇರ ರವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದು , ಸ್ವಾಮಿ ವಿವೇಕಾನಂದರ ಜೀವನದ ಆದರ್ಶಗಳು ಸಮಾಜದ ಇಂದಿನ ಶಿಕ್ಷಕರಿಗೆ ಆದರ್ಶಪ್ರಾಯವಾಗಿರಬೇಕೆಂಬ ಆಶಯ ವ್ಯಕ್ತಪಡಿಸಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಸುರೇಂದ್ರ ರವರು ಕಾರ್ಯಾಗಾರದ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಐ.ಟಿ.ಐ ವಿದ್ಯಾಮಂದಿರ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಮೇರಿ ಎಲಿಜೆಬೆತ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ವಸಂತಲಕ್ಷ್ಮಿ ರವರು ಸ್ವಾಗತಿಸಿದರು. ಶ್ರೀಯುತ ವೆಂಕಟೇಶ್ ರವರು ವಂದಿಸಿದರು.

ವರದಿ : ಶಿವಕುಮಾರ್

---

**ಒಂದು ಮನವಿ**

**ಆತ್ಮೀಯ ಶಿಕ್ಷಕರೇ,**

**ಶಿಕ್ಷಕ ಸಮಾಚಾರ ಶಿಕ್ಷಕರಿಂದ, ಶಿಕ್ಷಕರಿಗಾಗಿ ಹೊರಬರುತ್ತಿರುವ ಮಾಸಪತ್ರಿಕೆ. ಪತ್ರಿಕೆಯು ಶಿಕ್ಷಕರಲ್ಲಿರುವ ಲೇಖನ ಪ್ರತಿಭೆಯನ್ನು ಅನಾವರಣಗೊಳಿಸಲು ಒಂದು ಹೊಸ ಪ್ರಯೋಗವನ್ನು ಕೈಗೆತ್ತಿಕೊಂಡಿದೆ. ಯಾವ ಶಿಕ್ಷಕರಿಗೆ ತಮ್ಮಲ್ಲಿರುವ ಲೇಖನ ಕಲೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬ ಆಸೆ ಇದೆಯೋ ಅಂಥವರಿಗಾಗಿ ಎರಡು ದಿನಗಳ "ಬರಹಗಾರರ ಕಮ್ಮಟ"ವನ್ನು ಆಯೋಜಿಸಿದೆ. ಕಮ್ಮಟವು ಅಕ್ಟೋಬರ್ ರಜೆಯಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ. ಊಟ, ವಸತಿ ಸೌಕರ್ಯವನ್ನು ಉಚಿತವಾಗಿ ಏರ್ಪಡಿಸಲಾಗುವುದು. ಆಸಕ್ತ ಅಧ್ಯಾಪಕರು ತಮ್ಮ ಪೂರ್ಣ ವಿವರವನ್ನು ಪತ್ರಿಕೆಯ ವಿಳಾಸಕ್ಕೆ ಅಕ್ಟೋಬರ್ 5ರೊಳಗಾಗಿ ಕಳುಹಿಸಿಕೊಡಬೇಕು. ದಿನಾಂಕ ಮತ್ತು ಇತರ ವಿವರಗಳನ್ನು ಅಂಚೆ ಮೂಲಕ ತಿಳಿಸಲಾಗುತ್ತದೆ.**

**– ಸಂಪಾದಕ**

# ಚಿಕಾಗೋ ಸಮ್ಮೇಳನದಲ್ಲಿ ವಿವೇಕಾನಂದರ ಸಾಧನೆ



■ 'ಶ್ವೇತಾದ್ರಿ'

ಚಿಕಾಗೋ ನಗರದ ಕೆಲವು ಪ್ರಮುಖ ನಾಗರಿಕರು ಸೇರಿ 'ವರ್ಲ್ಡ್ ಕೊಲಂಬಿಯನ್ ಎಕ್ಸ್‌ಪೊಸಿಷನ್' ಅನ್ನು 1893ರಲ್ಲಿ ನಡೆಸಬೇಕೆಂದು 1889ರಲ್ಲಿ ನಿರ್ಧರಿಸಿದರು. ಇದರ ಉದ್ದೇಶ ಲೌಕಿಕ ಜಗತ್ತಿನಲ್ಲಿ ಮಾನವ ಸಾಧಿಸಿರುವ ಅದ್ಭುತ ಪ್ರಗತಿಯನ್ನು ಒಂದೆಡೆ ಪ್ರದರ್ಶಿಸಬೇಕೆಂಬುದು. ಲೌಕಿಕ ಪ್ರಗತಿಯೊಂದಿಗೇ ಮಾನವ ಚಿಂತನೆಯ ವಲಯದಲ್ಲಿ ನಡೆಸಿದ ಮಹತ್ವದ ಪ್ರಯೋಗಗಳನ್ನು ನಿರೂಪಿಸುವ ಅಗತ್ಯ ವ್ಯವಸ್ಥಾಪಕರಿಗೆ ಕಂಡು ಬಂದಿತು. ಆದ್ದರಿಂದ ಪ್ರಪಂಚದ ಎಲ್ಲ ಧರ್ಮಗಳ ಪ್ರತಿನಿಧಿಗಳೂ ಸಮ್ಮೇಳನದಲ್ಲಿ ಪಾಲ್ಗೊಂಡು ತಮ್ಮ ತಮ್ಮ ಧರ್ಮಗಳ ಪರಿಚಯ ಮಾಡಿಕೊಡುವುದು ಯುಕ್ತ ಎಂದು ತೀರ್ಮಾನಿಸಿದರು. ಸರ್ವಧರ್ಮ ಸಮ್ಮೇಳನ ಸಾಧಿಸಬಹುದಾದುದನ್ನು ಶ್ರೀ ಬಾನಿ ಅವರು ಹೀಗೆ ಕಲ್ಪಿಸಿಕೊಳ್ಳುತ್ತಾರೆ. 'ಹಿರಿಯ ಧರ್ಮಗಳನ್ನು ಸಮೀಪಕ್ಕೆ ತಂದು ಅವುಗಳ ನಾಯಕರಲ್ಲಿ ಸ್ನೇಹ ಸಂಪರ್ಕವನ್ನು ಹೆಚ್ಚಿಸಿದರೆ ಅವರಲ್ಲಿ ಪರಸ್ಪರ ಸಹಾನುಭೂತಿಯೂ ಐಕ್ಯತೆಯೂ ಮೂಡುತ್ತದೆ. ಸಹಮಾನವರ ಸೇವೆಯೂ ಸಾಧ್ಯವಾಗುತ್ತದೆ'. ಸಮ್ಮೇಳನಕ್ಕೆ ನಡೆದ ಮೂರುವರ್ಷಗಳ ಸಿದ್ಧತೆಯನ್ನು ಗಮನಿಸಿದರೆ 'ಕ್ರೈಸ್ತ ಧರ್ಮದ ಮೇಲ್ಮೆಯನ್ನು ಜಗತ್ತಿಗೆ ಸಾರುವುದೇ ಸರ್ವಧರ್ಮ ಸಮ್ಮೇಳನದ ಉದ್ದೇಶ' ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯ ಪಡುತ್ತಾರೆ.

1893 ಸೆಪ್ಟೆಂಬರ್ 11 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಗಳು ತಮ್ಮ ಭಾಷಣಗಳನ್ನು ಓದಿದರು. ವಿವೇಕಾನಂದರ ಸರದಿ ಬಂದಾಗ ಪ್ರತಿಸಲವೂ 'ಆಮೇಲಾಗಲಿ' ಎಂದು ಮುಂದೂಡುತ್ತಿದ್ದರು. ದಿನದ ಕಡೆಯಲ್ಲಿ ಎದ್ದಾಗಲೂ ಏನು ಹೇಳಬೇಕೆಂದು ಹೊಳೆಯಲಿಲ್ಲ. ದೇವಿ ಸರಸ್ವತಿಯನ್ನು ನೆನೆದು ತಮ್ಮ ಗುರುಗಳಾದ ಶ್ರೀ ರಾಮಕೃಷ್ಣಪರಮಹಂಸರನ್ನು ಸ್ಮರಿಸುತ್ತಾ 'ಅಮೇರಿಕಾದ ಸಹೋದರಿಯರೇ, ಸಹೋದರರೆ', ಎಂದು ಸಂಬೋಧಿಸಿದರು. ಇದಕ್ಕೆ ಸಿಕ್ಕ ಕರತಾಡನದ ಪ್ರಶಂಸೆ ಅವರ್ಣನೀಯ. ಅನಂತರ ಸ್ವಾಮೀಜಿಯವರು ತಮಗೆ ಆತ್ಮೀಯವಾದ ಸ್ವಾಗತವನ್ನು ನೀಡಿದ್ದಕ್ಕಾಗಿ ಪ್ರಪಂಚದ ಅತ್ಯಂತ ಪ್ರಾಚೀನವಾದ ಸಂನ್ಯಾಸಿಗಳ ಸಂಘದ ಪರವಾಗಿ ಕೃತಜ್ಞತೆಯನ್ನು ಅರ್ಪಿಸಿದರು. ವಿವಿಧ ಧರ್ಮಗಳ ಮಾತೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಹಿಂದೂ ಜನಾಂಗಕ್ಕೆ ಸೇರಿದ ಎಲ್ಲ ಪಂಥಗಳ ಎಲ್ಲ ವರ್ಗಗಳ ಕೋಟ್ಯಾನುಕೋಟಿ ಜನರ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಬೇರೆ ಬೇರೆ ಕಡೆಗಳಲ್ಲಿ ಹುಟ್ಟಿದ ನದಿಗಳೆಲ್ಲ ಕೊನೆಗೆ ಕಡಲನ್ನೇ ಸೇರುವಂತೆ ಎಲ್ಲ ಧರ್ಮಗಳೂ ಭಗವಂತನನ್ನೇ ಸೇರುತ್ತದೆ ಎಂದರು. 'ಯಾರು ಯಾವ ರೂಪದಲ್ಲಿ ನನ್ನನ್ನು ಭಜಿಸುತ್ತಾರೋ ಅವರಿಗೆ ಆ ರೂಪದಲ್ಲಿ ದೊರಕುತ್ತೇನೆ'. ಎಂಬ ಭಗವಂತನ ಮಾತನ್ನು ಉದ್ಧರಿಸಿದರು. ಕೊನೆಯಲ್ಲಿ ಧರ್ಮಗಳು ಪರಸ್ಪರ ವಿರೋಧಿಸುವುದನ್ನು ಆದಷ್ಟು ಬೇಗ ಬಿಡಬೇಕು ಎಂದು ಹೇಳಿ ತಮ್ಮ ಮಾತನ್ನು ಸ್ವಾಮೀಜಿ ಮುಗಿಸಿದರು.

ಅನಂತರದ ದಿನಗಳಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣಗಳಲ್ಲಿ ಹಿಂದೂ ಧರ್ಮದ ವಿಚಾರಗಳು ಅದರ ಜಾಗೃತಿಗಳನ್ನು ಎಳೆ ಎಳೆಯಾಗಿ ವಿವರಿಸಿದರು. ಭಾರತಕ್ಕೆ ಪಾದ್ರಿಗಳನ್ನು ಕಳುಹಿಸಿ ಆತ್ಮವನ್ನು ಉದ್ಧರಿಸುವ ಬದಲು ಭಾರತೀಯರ ಬಡತನ ಹೋಗಲಾಡಿಸಲು ಏಕೆ ಪ್ರಯತ್ನಿಸಿಲ್ಲವೆಂದು ಪ್ರಶ್ನಿಸಿದರು. ಜಾತಿ, ಮತ, ಪಂಥ, ಬುಡಕಟ್ಟು, ದೇಶ ಇವುಗಳ ಅಡೆ ತಡೆಗಳನ್ನು ಕಿತ್ತೊಗೆಯಬೇಕು ಎಂದು ಸಾರಿದರು. ಪಾಪ ಎಂಬುದಿಲ್ಲ, ಯಾರೂ ಪಾಪಿಗಳಲ್ಲ, ಎಲ್ಲರೂ ಅಮೃತ ಪುತ್ರರು, ಚರ್ಚು, ಮಸೀದಿಗಳಲ್ಲಿ, ದೇವಾಲಯ ವಿಹಾರಗಳಲ್ಲಿ ನೀವು ಹುಡುಕುತ್ತಿರುವುದು ನಿಮ್ಮೊಳಗೇ ಇದೆ. ನಿಮ್ಮ ಆತ್ಮವೇ ಅದು. ಅದೇ ನೀವು ಎಂದು ಸ್ವಾಮಿಜಿ ಸಾರಿದಾಗ ಅಮೇರಿಕಾದ ಪತ್ರಿಕೆಗಳು ಹೀಗೆ ಖಾರವಾಗಿ ಪ್ರತಿಕ್ರಿಯಿಸಿದವು. 'ಇಂತಹ ಆಧ್ಯಾತ್ಮಿಕ ಉಚ್ಚ ಶಿಖರಗಳಲ್ಲಿ ನಿಂತವರ ದೇಶಕ್ಕೆ ಧರ್ಮೋಪದೇಶಕ್ಕಾಗಿ ಪಾದ್ರಿಗಳನ್ನು ಕಳುಹಿಸುವುದಕ್ಕಿಂತ ಹೆಚ್ಚಿನ ಮೂರ್ಖತನ ಇನ್ನಿಲ್ಲ'. ಸ್ವಾಮಿ ವಿವೇಕಾನಂದರ ಸಮಗ್ರ ಕೃತಿ ಶ್ರೇಣಿಯ ಮುನ್ನುಡಿಯಲ್ಲಿ ಸೋದರಿ ನಿವೇದಿತಾ ಹೀಗೆ ಹೇಳಿದ್ದಾರೆ. 'ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸಗಳ ಸ್ವರೂಪವನ್ನು ಹೀಗೆ ಸಂಕ್ಷೇಪಿಸಬಹುದು. ಪ್ರಾರಂಭದಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಕುರಿತು ಹೇಳಹೊರಟರು. ಆದರೆ ಅವರು ತಮ್ಮ ಉಪನ್ಯಾಸ ಮುಗಿಸಿದಾಗ ಹಿಂದೂ ಧರ್ಮ ಪುನಸ್ಸೃಷ್ಟಿಗೊಂಡಿತ್ತು.'

# ಶಿಕ್ಷಣದಿಂದ ಒಳ್ಳೆಯ ಸಂಸ್ಕಾರ






ಶಿಕ್ಷಣವೆಂದರೆ ಬರೀ ಅಕ್ಷರವಲ್ಲ. ಅದೊಂದು ಸಂಸ್ಕಾರ. ಶಿಕ್ಷಕರು ಚಲನಶೀಲರಾದರೆ ಮಾತ್ರ ವಿದ್ಯಾರ್ಥಿಗಳು ಚಲನಶೀಲರಾಗಲು ಸಾಧ್ಯ. ಶಿಕ್ಷಣದಿಂದ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡಿ ಎಂದು ಹುನ್ನೂರು ಮಧುರಖಂಡಿಯ ಬಸವಜ್ಞಾನ ಗುರುಕುಲದ ಶರಣ ಈಶ್ವರ ಮಂಟೂರ ಹೇಳಿದರು.

ಇಲ್ಲಿನ ಹೇಮರೆಡ್ಡಿ ಮಲ್ಲಮ್ಮ ಸಮುದಾಯ ಭವನದಲ್ಲಿ ತಾಲೂಕು ಘಟಕದ ಮಾಧ್ಯಮಿಕ ಶಿಕ್ಷಕರ ಸಂಘದ ಆಶ್ರಯದಲ್ಲಿ ಇತ್ತೀಚೆಗೆ ಜರುಗಿದ ಎಸ್‌ಎಸ್‌ಎಲ್‌ಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಅತಿಥಿಯಾಗಿ ಮಾತನಾಡಿದರು.

ಏಪ್ರಿಲ್‌ನಲ್ಲಿ ಜರುಗಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ಜಿಲ್ಲೆಯ ವಿವಿಧ ಪ್ರೌಢಶಾಲೆಗಳಿಂದ ಆಗಮಿಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ, ಕ್ಷೇತ್ರ ಶಿಕ್ಷಣ ಅಧಿಕಾರಿ ಸುರೇಶ ಹುಗ್ಗಿ ಅತಿಥಿಯಾಗಿ ಆಗಮಿಸಿದ್ದರು.

ರಾಜ್ಯ ಸಮಿತಿ ಸದಸ್ಯರಾದ ಗುರುನಾಥ ತಳವಾರ, ವೆಂಕಟೇಶ ಕೇರಿ, ಅಶೋಕ ಚಿಮಲ, ಜಿಲ್ಲಾ ಘಟಕದ ಅಧ್ಯಕ್ಷ ದಯಾನಂದ ಸಿಕ್ಕೇರಿ, ಖಜಾಂಚಿ ಎಂ.ಐ.ಲಮಾಣಿ, ಪಿ. ನಾಗರಾಜ ವೇದಿಕೆಯಲ್ಲಿದ್ದರು. ಎಂ.ಐ. ಕಟಗೇರಿ ವಿ.ಎಸ್. ಸಾತನ್ನವರ, ಜಿಲ್ಲೆಯ ವಿವಿಧ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರು ಸಮಾರಂಭದಲ್ಲಿ ಹಾಜರಿದ್ದರು. ತಾಲೂಕು ಘಟಕದ ಅಧ್ಯಕ್ಷ ಎಸ್.ಎ. ಭರಮಗೌಡರ ಸ್ವಾಗತಿಸಿದರು. ಆರ್. ಎಚ್. ಕಂಠಿ ಕಾರ್ಯಕ್ರಮ ನಿರೂಪಿಸಿದರು. ಜಯಶ್ರೀ ಭಂಡಾರಿ ವಂದಿಸಿದರು.

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

SEPTEMBER 2013
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com